ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದವೀರಪ್ಪನವರು ಇಲ್ಲಿ ಭಾಷಣ ಮಾಡುವಾಗ ಎಲ್ಲವನ್ನೂ ಇಂಗ್ಲಿಷಿನಲ್ಲೇ ಹೇಳಿದರು. ಆದರೆ ನಮ್ಮಂತಹವರಿಗೆ ಇಂಗ್ಲಿಷು ಬರುವುದಿಲ್ಲ. ನಮ್ಮ ರಾಜ್ಯ ಕನ್ನಡ ರಾಜ್ಯ ಎಂದು ಬಾಯಲ್ಲಿ ಹೇಳುತ್ತಾರೆ, ಆದರೆ ಎಲ್ಲ ವಿಚಾರಗಳೂ ಇಲ್ಲಿ ಇಂಗ್ಲಿಷಿನಲ್ಲೆ ನಡೆಯುತ್ತಿವೆ. ಮಾನ್ಯ ಅಧ್ಯಕ್ಷರು ಇನ್ನು ಮುಂದೆ ಎಲ್ಲ ವ್ಯವಹಾರಗಳನ್ನೂ ಇಲ್ಲಿ ಕನ್ನಡದಲ್ಲೇ ನಡೆಸಲು ಸಹಾಯ ಮಾಡಬೇಕು ಎಂದು ಅವರಲ್ಲಿ ನಾನು ಕೇಳಿಕೊಳ್ಳುತ್ತೇನೆ. ಸ್ವರಾಜ್ಯ ಬಂದು ಇಷ್ಟು ದಿವಸಗಳಾದರೂ ಇನ್ನೂ ಹೆಚ್ಚು ಜನರು ವಿದ್ಯಾವಂತರಾಗಿಲ್ಲ. ಈಚೆಗೆ ಸ್ವಲ್ಪ ವಿದ್ಯಾವಂತರಾದವರು ಹೆಚ್ಚು ಹೆಚ್ಚು ಬರುತ್ತಿದ್ದಾರೆ. ಇವರೆಲ್ಲ ಮುಂದೆ ನಮ್ಮ ಹಾಗೆ ಇಲ್ಲಿಗೆ ಸದಸ್ಯರುಗಳಾಗಿಯೂ ಬರುತ್ತಾರೆ. ಇದರಿಂದ ನಮ್ಮ ಹಳ್ಳಿಗಾಡಿನ ಜನರಿಗೂ ಸಂತೋಷವಾಗುತ್ತದೆ. ಇನ್ನೊಂದು ವಿಚಾರ ಇಲ್ಲಿ ಹೇಳಬೇಕಾಗಿದೆ. ನಮ್ಮ ಶಾಸನ ಸಭೆಗಳನ್ನು ನೋಡಲು ಹಳ್ಳಿಗಾಡಿನಿಂದ ಅನೇಕ ಜನರು ಬಂದು ನೋಡಿ ಸಂತೋಷ ಪಡುತ್ತಾರೆ. ಆದರೆ ಈ ಬಗ್ಗೆ ಕೆಲವು ದಿನಗಳಿಂದ ಇಲ್ಲಿ ನಡೆಯುತ್ತಿರುವ ರೀತಿನೀತಿಗಳನ್ನು ನೋಡಿದರೆ ನಮ್ಮ ಈ ಸಭೆಯ ಘನತೆ ಹಾಗೂ ಗೌರವಗಳಿಗೆ ಧಕ್ಕೆ ಬರುವಂತೆ ಆಗುತ್ತಿದೆ. ಇದರ ಕಡೆಗೆ ಯಾರೂ ನಿಗಾ ಕೊಡುತ್ತಿಲ್ಲ. ಈ ಸಭೆಯಲ್ಲಿ ಒಂದೇ ಸಾರಿ ಸುಮಾರು ೩೦–೪೦ ಜನರು ಎದ್ದು ನಿಂತು ಮಾತನಾಡಲು ಹೋದರೆ ಇಲ್ಲಿದ ಗೊಂದಲಗಳಿಗೆ ಕಾರಣವಾಗುತ್ತದೆ. ಇದನ್ನು ಹೊರಗಿನಿಂದ ಬಂದ ಜನರು ನೋಡಿ ವಿಷಾದಪಡುವಂತಹ ಪರಿಸ್ಥಿತಿ ಇದೆ. ಇದು ಎಲ್ಲರಿಗೂ ಅವಮಾನವಾಗುತ್ತದೆ. ಇದಕ್ಕಾಗಿ ಅಧ್ಯಕ್ಷರು ಎಲ್ಲರಿಗೂ ಹಿತವಚನಗಳನ್ನು ಹೇಳಿ ಸಭೆಯಲ್ಲಿ ಎಲ್ಲರೂ ಗೌರವದಿಂದ ಇರುವಂತೆ ಸಹಾಯ ಮಾಡಬೇಕು. ಅಲ್ಲದೆ ನಮ್ಮ ವಿರೋಧ ಪಕ್ಷದ ಯಜಮಾನರೇ ಬಹಳ ದೊಡ್ಡದಾಗಿ ರೌದ್ರಾವತಾರ ತಾಳಿದರೆ ಇತರ ಜನ ಹೇಗಿರಬೇಕು? ಇದನ್ನು ಅವರು ಸ್ವಲ್ಪ ಯೋಚನೆ ಮಾಡಬೇಕು. ಅಕ್ಕಪಕ್ಕದ ರಾಜ್ಯಗಳಲ್ಲಿ ವಿಧಾನ ಸಭೆ ಹೇಗೆ ನಡೆಯುತ್ತಿವೆ ಎಂದು ತಾವು ನೋಡಿರಬಹುದು. ಅದರಂತೆ ಇಲ್ಲೂ ಕೂಡ ಚೆನ್ನಾಗಿ ನಡೆಯುವ ಬಗ್ಗೆ ಸ್ವಲ್ಪ ವಿಚಾರ ಮಾಡಬೇಕು.

ಇನ್ನು ನಾನು ಅಭಾವದ ಪರಿಸ್ಥಿತಿ ಬಗ್ಗೆ ಇಲ್ಲಿ ಒಂದೆರಡು ವಿಚಾರಗಳನ್ನು ಹೇಳಬೇಕಾಗಿದೆ. ನಮ್ಮ ಭಾಗದಲ್ಲಿ ಐದಾರು ವರ್ಷಗಳಿಂದಲೂ ಅಭಾವದ ಪರಿಸ್ಥಿತಿ ಬರುತ್ತಲೇ ಇದೆ. ಇದನ್ನು ಮೂರು ವರ್ಷಗಳಿಂದಲ್ಲೂ ಇಲ್ಲಿ ಹೇಳುತ್ತಲೇ ಬಂದಿದ್ದೇವೆ. ಇದೂ ನಮ್ಮ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಕಷ್ಟವಾಗಿದೆ. ತಾಲ್ಲೂಕು ಬೋರ್ಡುಗಳವರೇನು ಕುಡಿಯುವ ಬಾವಿಗಳನ್ನು ಮಾಡಿಸಿದರೂ ಅದರಲ್ಲೂ ನೀರು ಸರಿಯಾಗಿ ಎಲ್ಲಾ ಜನಕ್ಕೂ ಸಿಗುತ್ತಿಲ್ಲ. ತಾಲ್ಲೂಕು ಬೊರ್ಡುಗಳವರು ೧೫ ಸಾವಿರ ಖರ್ಚು ಮಾಡಿ ಬೋರ್ ವೆಲ್ಸ್‌ಗಳನ್ನು ಮಾಡಿಸಿದ್ದಾರೆ. ನಮ್ಮ ಹೆಬ್ಬಾಳದಲ್ಲಿ ಇಂತಹ ಒಂದು ಬಾವಿ ಬೇಕೆಂದು ಏಪ್ರಿಲ್ ತಿಂಗಳಲ್ಲೇ ಅರ್ಜಿ ಕೊಟ್ಟಿದ್ದರೂ ಇಲ್ಲಿರುವ ಜಾಯಿಂಟ್ ಡೈರೆಕ್ಟರು ಹೆಚ್ಚು ಆಸಕ್ತಿಯಿಂದ ಕೆಲಸ ಮಾಡುತ್ತಿಲ್ಲ. ಇಲ್ಲಿಗೆ ಬೇಕಾದ ಮೆಷಿನರಿಗಳು ಬಂದು ಸುಮಾರು ಒಂದೂವರೆ ತಿಂಗಳಾದರೂ ಇದಕ್ಕೆ ಬೇಕಾದ ಇತರ ಸಾಮಾನುಗಳು ಇನ್ನೂ ಬಂದಿಲ್ಲ. ಆದುದರಿಂದ ವ್ಯವಸಾಯದ ಇಲಾಖೆಯಲ್ಲಿರುವ ಅಧಿಕಾರಿಗಳು ಜನರೊಡನೆ ಸಹಕರಿಸಿ ಆಸೆಯಿಂದ ಕೆಲಸ ಮಾಡಬೇಕೆಂದು ಇಲ್ಲಿ ನಾನು ಸೂಚನೆ ಕೊಡುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಆಗಾಗ್ಗೆ ಕ್ಷಾಮ ತಲೆದೂರುತ್ತಲೇ ಇದೆ. ಅಲ್ಲದೆ ಕೇಂದ್ರಕ್ಕೆ ಶಿಫಾರಸು ಮಾಡಿರುವ ಜಿಲ್ಲೆಗಳಲ್ಲ ತುಮಕೂರು ಹಾಗೂ ದಾವಣಗೆರೆ ಜಿಲ್ಲೆಗಳನ್ನು ಸೇರಿಸಿಲ್ಲ ಎಂದು ಕೇಳುತ್ತೇವೆ. ಇವೆರಡು ಜಿಲ್ಲೆಗಳನ್ನೂ ಸೇರಿಸಿ ಇಲ್ಲಿಗೂ ಸಾಕಷ್ಟು ಕ್ಷಾಮ ಪರಿಹಾರದ ಕೆಲಸಗಳು ಸಿಗುವಂತೆ ಜನಕ್ಕೆ ಸಹಾಯ ಮಾಡಬೇಕೆಂದು ಹೇಳುತ್ತೇನೆ. ಐದಾರು ವರ್ಷಗಳಿಂದಲೂ ನಮ್ಮ ಭಾಗದಲ್ಲಿ ಮಳೆಯಾಗದೆ ಇದ್ದು ಅಡಿಕೆ ಹಾಗೂ ತೆಂಗಿನ ತೋಟಗಳಿಗೆ ಬಹಳ ನಷ್ಟವಾಗುತ್ತಿದೆ. ಇದರಿಂದಾಗಿ ಇಲ್ಲಿನ ಜನ ಬಹಳ ಕಷ್ಟಪಡುತ್ತಿದ್ದಾರೆ.

ಇನ್ನು ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಹೇಳಬೇಕಾದರೆ ಇಲ್ಲಿ ಕೆಲವು ಅವಿವೇಕಗಳು ಆಗುತ್ತಿವೆ ಎಂದು ಕೇಳುತ್ತೇನೆ. ಇಲ್ಲಿರುವ ಅಧಿಕಾರಿಗಳು ಜನರಿಗೆ ಸರಿಯಾದ ಸಹಾಯ ಸೌಕರ್ಯಗಳನ್ನು ಕೊಡುತ್ತಿಲ್ಲ. ಮತ್ತು ಸರ್ಕಾರ ಕೊಟ್ಟ ಹಣವನ್ನು ಸರಿಯಾಗಿ ವಿನಿಯೋಗ ಮಾಡಿದ ಜನರಿಗೆ ಕಷ್ಟಗಳನ್ನು ಕೊಡುತ್ತಿದ್ದಾರೆ. ನಮ್ಮ ದೇಶಕ್ಕೆ ಸ್ವರಾಜ್ಯ ಬಂದ ಮೇಲೆ, ಎಲ್ಲ ರಾಜ್ಯದಲ್ಲೂ ಒಂದು ರೀತಿಯಾದ ಶಿಸ್ತು ಇರಬೇಕು. ಇಂದು ಅಂತಹ ಶಿಸ್ತುಗಳು ಅನೇಕ ರಾಜ್ಯಗಳಲ್ಲಿ ಇಲ್ಲ. ಇದರಿಂದ ಜನರಿಗೆ ತೊಂದರೆಗಳಾಗುತ್ತವೆ. ಇದರ ಕಡೆಗೆ ಲಕ್ಷ ಕೊಡಬೇಕು.

ಇನ್ನು ಅಡಮಾನದ ಬ್ಯಾಂಕುಗಳ ಮೂಲಕ ಸಾಲ ಕೊಡುವಾಗ ಸುಮಾರು ಐದು ಸಾವಿರದಷ್ಟು ಮಿನಿಮಂ ಎಂದು ನಿಗದಿ ಮಾಡಿಕೊಡಬೇಕು ಎಂದು ಮಾಡಿದ್ದಾರೆ. ಆದರೆ ಈಗ ಐದು ಸಾವಿರದಿಂದ ಒಂದು ಬಾವಿ ಕೆಲಸ ಪೂರ್ತಿಯಾಗುವುದಿಲ್ಲ. ಆದುದರಿಂದ ರೈತರು ಒಂದು ಬಾವಿಗಾಗಿ ಎಷ್ಟು ಎಸ್ಟಿಮೇಟು ಮಾಡಿ ಪ್ಲಾನುಗಳನ್ನು ಕೊಟ್ಟಿರುತಾರೋ ಅಷ್ಟು ಹಣವನ್ನು ಪೂರ್ತಿ ಕೊಟ್ಟು ಬಾವಿ ಕೆಲಸಗಳನ್ನು ಬೇಗನೆ ಮಾಡಲು ಸಹಾಯ ಮಾಡಬೇಕು. ಇದೂ ಅಲ್ಲದೆ ನಮ್ಮ ತಾಲ್ಲೂಕಿನಲ್ಲಿ ೨೦೦-೩೦೦ ಬಾವಿಗಳಾಗಿವೆ. ಇದಕ್ಕೆ ಪವರು ಸಿಗುತ್ತಿಲ್ಲ. ನಮ್ಮ ತಾಲ್ಲೂಕಿನ ಬಗ್ಗೆ ಹೇಳಲು ಎಲೆಕ್ಟ್ರಿಕ್ ಲೈನ್ ಮಂಜೂರು ಆಗಿದ್ದರೂ ಇನ್ನೂ ಕಂಬಗಳನ್ನು ಹಾಕಿಲ್ಲ. ನಮ್ಮ ಕಡೆಯಲ್ಲಿ ೨೦೦-೩೦೦ ಪಂಪುಗಳ ಅವಶ್ಯಕತೆ ಇದೆ.

ಇನ್ನು ನಮ್ಮ ಕನ್ನಡ ರಾಜ್ಯದಲ್ಲಿ ಕನ್ನಡ ಆಡಳಿತದ ಬಾಷೆಯಾಗಬೇಕು ಎಂದು ಮಾಡಿದ್ದಾರೆ. ಆದರೆ ಇಂದು ಬಿ. ಎ ಓದಿರುವ ಹುಡುಗರಿಗೆ ಸರಿಯಾಗಿ ಕನ್ನಡದಲ್ಲಿ ಕಾಗುಣಿತ ಬರೆಯಲು ಕೂಡ ಬರುವುದಿಲ್ಲ. ಆದುದರಿಂದ ಕನ್ನಡ ಭಾಷೆಯನು ಚೆನ್ನಾಗಿ ಕಲಿತು ಇದರ ಉಪಯೋಗ ಮಾಡುವುದನ್ನು ಮೊದಲು ನಮ್ಮ ಜನ ಚೆನ್ನಾಗಿ ಕಲಿಯುವಂತೆ ಮಾಡಬೇಕು ಎಂದು ನನ್ನ ಪ್ರಾರ್ಥನೆ.

ಆ ಮೇಲೆ ಅರಣ್ಯ ಇಲಾಖೆಯ ವಿಚಾರ ಸ್ವಲ್ಪ ಹೇಳಬೇಕಾಗಿತ್ತು.

ಉಪಾಧ್ಯಕ್ಷರು :—ಅದರ ಬಗ್ಗೆ ಆಗಲೆ ಅನೇಕರು ಹೇಳಿದ್ದಾರೆ. ತಾವು ತಮ್ಮ ಭಾಷಣವನ್ನು ದಯವಿಟ್ಟು ಮುಗಿಸಿ.

ಶ್ರೀ ಚಿಕ್ಕೇಗೌಡ :—ಇಲ್ಲಿ ಬಂದಿರತಕ್ಕವರೆಲ್ಲರೂ ವಿದ್ಯಾವಂತರೇ ಆಗಿದ್ದಾರೆ, ಅಲ್ಲದೆ ಎಲ್ಲರೂ ಜನರ ಕಷ್ಟಸುಖಗಳೇನೆಂಬುದನ್ನು ಬಲ್ಲವರಾಗಿದ್ದಾರೆ ಆದರೆ. ಎಲ್ಲರಲ್ಲೂ ನಾನು ಕೇಳಿಕೊಳ್ಳುವುದೇನೆಂದರೆ ಇಲ್ಲಿ ಸದಸ್ಯರು ಈ ಮಾನ್ಯ ಸಭೆಗೆ ಹಾಗೂ ಸಭೆಯ ಅಧ್ಯಕ್ಷರಿಗೆ ಮತ್ತು ನಮ್ಮ ರಾಜ್ಯಕ್ಕೆ ಮತ್ತು ಎಲ್ಲರಿಗೂ ಒಂದು ಗೌರವ ಬರತಕ್ಕ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಆ ಅಧ್ಯಕ್ಷ ಸ್ಥಾನಕ್ಕೆ ತಮ್ಮನ್ನು ಆರಿಸಿದವರು ನಾವೆ, ಹಾಗೆ ತಮ್ಮನ್ನು ಆರಿಸಿ ಅಲ್ಲಿ ಕೂಡಿಸಿದ ನಂತರ ನಾವೇ ತುಮ್ಮನ್ನ ಘೇರಾವ್ ಮಾಡುವುದು ಎಂದರೇನು ಅರ್ಥ ? ಇದು ಯಾರಿಗೂ ಮರ್ಯಾದೆಯನ್ನು ತರತಕ್ಕದ್ದಲ್ಲ. ಇನ್ನಾದರೂ ಹಾಗೆ ಮಾಡಬಾರದೆಂದು ಎಲ್ಲರಲ್ಲೂ ಪ್ರಾರ್ಥಿಸಿ ನನಗೆ ಮಾತನಾಡುವುದಕ್ಕೆ ಇಷ್ಟು ಅವಕಾಶವನ್ನು ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತೇನೆ,

SRI D. B. KALMANAR (Aland) :—Mr. Speaker Sir, while vehemently opposing the Supplementary Demands for grants I would like to make some observations.

(Smt. Nagarathnamma Hiremath in the Chair)

Sir, the demand No. 17 deals with education and in that demand a sum of Rs. 6,35,000 and odd is spent for the Expo-70, trip to Japan This Expo-70 trip has become a very big topic in the State and it has showed how money has been mis-spent by the Government and for that a supplementary demand has been brought before this House. The Expo trip has exposed the Government and it has become quite clear that it was not meant for the purpose for which it was said to be

(Sri D. R. KALMANKAR)

arranged. It was only to accommodate ther own men. People who could afford to go on their own have been sent for this trip by the Government. If the list of persons is gone through it will be seen that the daughters and sons of Ministers, Secretaries, Judges of the High Court and other departmental people have been sent. Moreover, this was done very secretly and nobody knew about it. It is said that the scheme was sanctioned in the month of August 1970 but it came to light only after the agitation started and this student's agitation has made it quite clear as to how the Government has been squandering the valuable money contributed by the tax-payers.

Now regarding item No. 2 in the same demand there is an intensive educational development scheme that has been taken up in Bellary. It is true that hundred per cent of the cost will be met by the Central Government. I welcome this scheme, but my only contention is, while taking up such schemes due regard should have been given to the backwardness of the area and the most backward area should have been seelcted for this scheme. This kind of scheme also provides employment opportunities to many people. Further, if any scheme is to be taken up there must be an integrated approach to the scheme and priority should be given to the most backward area. It is well known that Bidar is the most backward area in the State. I feel it would have been proper for the Government to have taken up this scheme there. But it appears that some other considerations have prevailed upon the Government and probably, because Dr. V. K. R. V. Rao, the Union Minister and also our Hon. Deputy Minister for Education hail from Bellary District, this place seems to have been chosen for this scheme. I don't find any other reason for selecting this particular place.

Then Sir, demand No. 26 deals with labour and employment. I am very happy to note that a pilot scheme for the employment of educated unemployed like the Engineers, post-graduates, diploma-holders etc., has been taken up by the Government. It is said that under this scheme above 1500 people will be benefited during the year 1970-71. But what I feel is that the scope of this scheme is very much limited. I would have certainly welcomed it if the scope of this scheme had been widened and more and more educated unemployed are provided with employment opportunities. Further, there are certain conditions laid down in this scheme, i.e., for instance, those educated in our Universities etc. such conditions should not have been imposed. Then Sir, it is said that a sum of Rs. 150 in case of graduates and Rs. 100 in case of diploma-holders will be given. I think it is a very meagre sum considering the cost of living of the present day. The Government could also have thought of giving an impetus to industrial development so as to make an humble attempt to provide employment to the educated unemployed.

Coming to demand No. 27 which deals with the Bangalore Dairy, it can be said that the money is being mis-spent there. I will just read out the observations made by the public Accounts Committee in its report submitted to the House recently. It is Stated that :

> "The previous Director stated that he did not know the quantity of milk flowing into the Dairy till above the close of January 1967. He was also aware that the surplus milk was accumulating but did not take action to reduce the loss on this account though he was enthusiastic in raising the prices. The Director, the Committe believes, had joined the vested interests and this is evident from the fact that when there was surplus milk available, rates have been enhanced to particular parties. The transport contract has been given at Rs. 4 per k. m. without ascertaining that this was an exhorbitent rate. The Committee on account of these lapses are of opinion that the Director was fully responsible for the lapses and Government should take action and fix responsibility on him."

Sir, this itself is sufficient to show how money is being mis-spent in the Bangalore Dairy and the officers there are indulging in corruption, nepotism and favouritism. So, I think that the huge sum that is now being given under this Demand is also exorbitent. Further, if such officers are there and if there is no control and supervision on the expenditure that is being incurred, I am afraid these amounts also will be frittered away similarly.

Now, I come to Demand No. 33 which deals with famine relief Regarding famine relief, every year we are taking the valuable time of this House in discussing it and every year we are complaining of corruption, nepotism and so on and every year we are thinking afresh on this problem. I fail to understand why there is no integrated programme in the Fourth Plan for the chronically drought areas of the State. They could have held a survey of these areas, appointed a statutory body for this purpose and laid down priorities. In Andhra Pradesh they have set up a Board to go into the backward area of Rayalaseema. In Maharahtra they have appointed a board for the backward area of Konkan. When that is so, I fail to understand why this Government has not been able to chalk out an integrated programme and take up permanent measures. We have requested the Government to take up certain works and also follow-up works to tackle drought in our area but they have always turned a deaf ear to our requests. So, what is the use of giving suggestions? Two years ago we requested the Hon. Minister for Revenue to take some immediate measures to tackle the scarcity conditions prevailing in my taluk but they have not done anything at all. If at all they do something, it is done after a lapse of 3-4 months by which time the

(Sri D. B. KALMANKAR)

people may not need such aid. So, the time is an essential factor during scarcity conditions but that is also not paid heed to.

I have a submission regarding the M. S. K. Mills. Demand No. 5 deals with amounts to be given to this mill. About Rs. 46 lakhs were sanctioned for 1969–70 for implementation of a phased programme under the provisions of the Mysore State Aid to Industries Act, 1959. Rs. 25 lakhs have already been given and they now want Rs. 21 lakhs. I wish to submit that it is not doing well. The problem of labour is there. The labour laws are being flouted by the management. It appears that there is some collusion between this Government and the management which is a private management It is said that every month some amount is being paid by the management. So, there is something radically wrong in this mill. The poor workers had put up some demands and it was promised that they would be met. In spite of that, no serious effort is made by the Government to fulfil their demands. There was also agitation and the mill was also closed for a long time. There after the mill was opened but till now the Government have failed to take action for the redressal of their grievances. This being the attitude of the Government, this amount that is being asked by way of Supplementary Demands is going to be a waste. With these words I conclude

ಶ್ರೀ ಬಿ. ಎಂ. ಇದಿನಬ್ಬ :—(ಮಂಗಳೂರು–೨) ಸನ್ಮಾನ್ಯ ಅಧ್ಯಕ್ಷಿಣಿಯವರೇ, ಹಿಂದೆ ಈ ಅಭಾವ ಪರಿಸ್ಥಿತಿ ಬಗ್ಗೆ ಚರ್ಚೆ ಆದಾಗ ಅದರಲ್ಲಿ ಮಾತನಾಡಬೇಕೆಂದು ಅಪೇಕ್ಷೆಪಟ್ಟಿದ್ದೆ. ಅದು ಆಗಲಿಲ್ಲ. ಆದುದರಿಂದ ಈ ಸಪ್ಲಿಮೆಂಟರಿ ಎಸ್ಟಿಮೇಟಿನಲ್ಲಿ ಮಾತನಾಡಬಹುದು ಎಂದು ಅಧ್ಯಕ್ಷರು ಅಪ್ಪಣೆ ಕೊಟ್ಟಿರುವುದರಿಂದ ನಾನು ೩೩ನೇ ಡಿಮ್ಯಾಂಡ್ ಮೇಲೆ ಈ ಅಭಾವ ಪರಿಸ್ಥಿತಿಯ ವಿಷಯವನ್ನೇ ತೆಗೆದು ಕೊಂಡು ಕೆಲವೊಂದು ವಿಷಯಗಳನ್ನು ಹೇಳಲು ಈ ಸಂದರ್ಭದಲ್ಲಿ ಇಷ್ಟಪಡುತ್ತೇನೆ.

ಈ ಅಭಾವ ಪರಿಸ್ಥಿತಿ ಬಗ್ಗೆ ಹೇಳುವುದಾದರೆ ಈ ಬರಗಾಲ ಅನ್ನುವುದು ಬೇಕಾದಷ್ಟು ತರಹದಲ್ಲಿ ಬರುತ್ತದೆ, ಮಳೆ ಬಾರದೆ ಬರುವ ಪರಿಸ್ಥಿತಿಯೂ ಇದೆ, ಮಳೆ ಹೆಚ್ಚು ಬಂದು ಜನಗಳಿಗೆ ತೊಂದರೆ ಆಗಿ ಅಭಾವ ಆಗಬಹುದು. ಅವಘಡ ಎಂದಾಗ ಮೋಟಾರಿನಿಂದ ಬಿದ್ದು, ಇಲ್ಲವೆ ಸೈಕಲ್‌ನಿಂದ ಬಿದ್ದು, ದೋಣಿ ಮಗುಚಿ ಅಥವಾ ವಿಮಾನದಲ್ಲಿ ಹೋಗುವಾಗ ಗಗನಸಖಿಯರು ಕೊಡುವ ಚಾ ಕುಡಿಯುವಾಗಲೂ ಅವಘಡ ಆಗಬಹುದು. ಬರಗಾಲ ಎಂದರೆ ಅನಾವೃಷ್ಟಿಯಿಂದಲೂ ಬರುತ್ತದೆ, ಅತಿವೃಷ್ಟಿಯಿಂದಲೂ ಬರುತ್ತದೆ. ಮುಖ್ಯವಾಗಿ ನಮ್ಮ ಜಿಲ್ಲೆಯ ಬಗ್ಗೆ ಹೇಳುವುದಾದರೆ ನಮ್ಮಲ್ಲಿ ಮಳೆ ಬರತಕ್ಕದ್ದು ಜೂನ್ ತಿಂಗಳಿನಿಂದ ೫ ತಿಂಗಳು ಎಡಬಿಡದೆ ಬರುತ್ತದೆ. ಸುಮಾರು ೧೫೦ ಇಂಚು ಮಳೆ ಬರುತ್ತದೆ. ನಮ್ಮ ಜಿಲ್ಲೆ ಹೆಚ್ಚಾಗಿ ಭತ್ತ ಬೆಳೆಯತಕ್ಕಂಥ ಪ್ರದೇಶ. ಅತಿ ಹೆಚ್ಚು ಮಳೆಯಿಂದಾಗಿ ಅನೇಕ ಬಾರಿ ನಮ್ಮ ಬೆಳೆಗಳು ಹಾನಿಯಾದದ್ದುಂಟು. ನಮ್ಮ ಕಡೆ ಅನೇಕ ಹೆಸರಾದ ನದಿಗಳಿವೆ, ನೇತ್ರಾವತಿನದಿ, ಕುಮಾರಧಾರಾ, ಗುರುಪುರ ಹೊಳೆ ಇವುಗಳು ಇವೆ ನೇತ್ರಾವತಿಯ ಪ್ರವಾಹ ನಾವು ೩ ತಿಂಗಳಿಂದಲೂ ಕಾಣುತ್ತಾ ಇದ್ದೇವೆ. ಆ ನದಿಯ ದಡದಲ್ಲಿರತಕ್ಕಂಥ ಬಡವರ ಮನೆಗಳು ಏನು ಇವೆಯೋ, ಅದು ಮತ್ತು ಜಾನುವಾರುಗಳು ಇವೆಲ್ಲಾ ಪ್ರವಾಹದಲ್ಲಿ ಕೊಚ್ಚಿಕೊಂಡು ಹೊರಟುಹೋಗುತ್ತದೆ. ಯಾವುದೂ ಉಳಿಯುವುದಿಲ್ಲ. ಇದು ಒಂದು ತರಹ ಬರಗಾಲ ಇನ್ನೊಂದು ತರಹ ಬರಗಾಲ ಯಾವರೀತಿ ಇದೆ ಎಂದರೆ ಮಳೆ ಬಾರದೇ ಇರುವ ಬರಗಾಲ ಇದೆ. ಈ ಮಳೆ ಬಾರದೆ ಇರುವುದರಿಂದ ಬೆಳೆ ಆಗಲಿಕ್ಕಿಲ್ಲ, ಇದರಿಂದ ಜನಗಳಿಗೆ ತಿನ್ನಲಿಕ್ಕೆ ಏನೂ ಸಿಕ್ಕುವುದಿಲ್ಲ. ಮಳೆ ಬಾರದೆ ಇಷ್ಟು ಅನಾಹುತವಾಗುತ್ತದೆ. ಮಳೆ ಬಂದು ನೆರೆಯಿಂದ ಅನಾಹುತವಾಗುವುದು ಅಪಾರ. ಬಡವರ ಮನೆಮಾರುಗಳು ಮತ್ತು ಜಾನುವಾರುಗಳು ಎಲ್ಲವೂ ಕೂಡ ಹೆಚ್ಚು ಮಳೆಯಿಂದಾಗಿ, ನೆರೆಯಿಂದಾಗಿ ಕೊಚ್ಚಿಕೊಂಡು ಹೋಗುತ್ತವೆ. ಕಳೆದ ಸಾಲಿನಲ್ಲಿ ಗುರುಪುರದ ಹೊಳೆಯ ಪ್ರವಾಹದಲ್ಲಿ ಎರಡು ಜನ ತೀರಿ ಹೋದರು. ಅನೇಕ ಕಡೆ ಹಾನಿಯಾಯಿತು. ಮತ್ತು ಬೆಳೆಗಳು ನಾಶವಾಯಿತು.

ಮತ್ತು ಅನೇಕ ಕಡೆ ಬೆಳೆಗಳು ಕೊಯ್ಲಿಗೆ ಬಂದದ್ದು ನಾಶವಾಗಿ ಹೋದದ್ದು ಎಲ್ಲರಿಗೂ ಗೊತ್ತಿದೆ. ಈ ಸಂದರ್ಭದಲ್ಲಿ ಗುರುಪುರದ ನೆರೆಯಲ್ಲಿ ಎರಡು ಜನ ಸತ್ತವರಿಗೆ ಆಹಾರ ಮಂತ್ರಿಗಳು ಅವರಿಗೆ ಒಂದೊಂದು ಸಾವಿರ ರೂಪಾಯಿ ಪರಿಹಾರ ಕೊಡಬೇಕು ಎಂದು ಶಿಫಾರಸು ಮಾಡಿಸಿ ಕೊಡಿಸಿದರು. ಕಾನೂನಿನಲ್ಲಿ ನೆರೆಯಿಂದ ಸತ್ತವರಿಗೆ ೨೫೦ ರೂಪಾಯಿ ಕೊಡಬೇಕೆಂದು ಇದೆ ಎಂದು ಹೇಳಲಾಗುತ್ತಿದೆ. ಆದುದರಿಂದ ಇನ್ನು ಮುಂದಾದರೂ ಕೂಡ ನೆರೆಯಿಂದ ಸತ್ತವರಿಗೆ ಒಂದೊಂದು ಸಾವಿರ ರೂಪಾಯಿಯನ್ನಾದರೂ ಕೊಡುವ ಹಾಗೆ ಮಾಡಬೇಕು. ಈ ನೆರೆಯಿಂದ ಸತ್ತು ಹೋಗುವವರು ಬಹಳ ಬಡವರು. ಅವರಿಗೆ ಅನುಕೂಲ ಮಾಡಿಕೊಡಿ. ನೇತ್ರಾವತಿಯ ಎರಡು ಬದಿಗಳಲ್ಲೂ ಕೂಡ ಈ ಮಳೆಯ ನೆರೆಯಿಂದ ಅನಾಹುತವಾಗುತ್ತಿದೆ. ಹೆಚ್ಚು ಬೆಳೆ ಕೊಯ್ಲಿಗೆ ಬರುವ ಸಮಯದಲ್ಲಿ ಹೆಚ್ಚು ಮಳೆ ಬಿದ್ದು ಆ ಬೆಳೆಗಳು ಸಂಪೂರ್ಣವಾಗಿ ನಾಶವಾಗಿ ಬಿಡುತ್ತದೆ ಆದುದರಿಂದ ಈ ಸಂದರ್ಭದಲ್ಲಿ ನಾನು ಹೇಳುವುದು ಏನೆಂದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಈ ರೀತಿ ಹಾನಿಯಾದಂಥ ಕಡೆ ಕಂದಾಯವನ್ನು ಮಾಫಿ ಮಾಡಬೇಕು ಎಂದು ಮತ್ತು ನೆರೆಯಿಂದ ತೊಂದರೆಯಾಗಿರತಕ್ಕಂಥ ಜನರಿಗೆ ಡೆಪ್ಯೂಟಿ ಕಮೀಷನರಿಂದ ವಿಷಯಗಳನ್ನು ತಿಳಿದು ಕೊಂಡು ಅವರಿಗೆ ಉಪಕಾರ ಮಾಡಬೇಕು, ಪರಿಹಾರ ಕೊಡಬೇಕು. ಇದುವರೆಗೆ ಅವರಿಗೆ ಸರಿಯಾದ ಉಪಕಾರವೇ ಸಿಕ್ಕಲಿಲ್ಲ. ಸೆಂಟ್ರಲ್ ಗೌರ್ನಮೆಂಟ್‌ನವರು ಈ ಸ್ಕೀಮುಗಳಿಗೆ ಕೋಟಿಗಟ್ಟಳೆ ರೂಪಾಯಿಗಳ ನೆರವನ್ನು ಕೊಡುತ್ತಾರೆ. ಆದುದರಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಮತ್ತು ಉತ್ತರ ಕನ್ನಡ ಜಿಲ್ಲೆಗೆ ಈ ಎರಡು ಜಿಲ್ಲೆಗಳಿಗೆ ನೇರವಾಗಿ ಸಂಬಂಧಪಟ್ಟ ಹಣ ಕೊಡಬೇಕು. ಹೋದಸಲ ಕಂದಾಯ ಮಂತ್ರಿಗಳಿಗೆ ಒಂದು ಪ್ರಶ್ನೆ ಹಾಕಿದ್ದೆ. ಅವರು ಕೂಡ ಇದು ಒಂದು ತೊಡಕಿನ ಪ್ರಶ್ನೆ ಎಂದು ಹೇಳಿದರು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವಾಗಲೂ ನೆರೆಯಿಂದ ಅನಾಹುತವಾಗುತ್ತದೆ ಅವರಿಗೆ ಸರಿಯಾದ ಪರಿಹಾರ ಕೊಡಿ. ಈ ಡಿಮ್ಯಾಂಡ್‌ಗೆ ೨ ಕೋಟಿ ರೂಪಾಯಿಯಷ್ಟು ಇಟ್ಟಿದ್ದೀರಿ. ಅದರಲ್ಲಿ ನಮ್ಮ ಜಿಲ್ಲೆಗೆ ಸರಿಯಾಗಿ ಹಣ ಹಂಚಬೇಕು. ದಕ್ಷಿಣ ಕನ್ನಡ ಜಿಲ್ಲೆ ಸಂಪತ್ತಿನ ಜಿಲ್ಲೆ, ಅಲ್ಲಿರುವವರು ಮೀನು ತಿನ್ನುವವರು, ಮೀನು ತಿನ್ನುವವರು ಬುದ್ಧಿವಂತರು ಅಂತ ಈ ರೀತಿ ಸಮಾಧಾನದ ಭರವಸೆಯನ್ನು ಹೇಳಿದರೆ ಆಗುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬುದ್ಧಿವಂತರಿದ್ದಾರೆ, ಕೆಲಸಮಾಡುವವರಿದ್ದಾರೆ, ಸಂಪತ್ತಿದೆ, ಬ್ಯಾಂಕುಗಳಿವೆ; ನಿಜ. ವೈಯಕ್ತಿಕವಾಗಿ ಸಾಧನೆ ಮಾಡಿ, ಕೆಲಸ ಮಾಡಿದ್ದರಿಂದ ಆ ರೀತಿ ಸಂಪತ್ತು ಬಂದಿದೆ. ನಮಗೆ ಏನಾದರೂ ನೆರವು ಕೊಡುವುದಿದ್ದರೆ ನೆರೆಯಲ್ಲಿ ಹಾನಿಯಾಗತಕ್ಕ, ನದೀ ದಡದಲ್ಲಿರುವ ಎಲ್ಲ ಜನರಿಗೂ ನೆರವು ಕೊಡತಕ್ಕ ಏರ್ಪಾಡನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಅತಿ ದೈನ್ಯದಿಂದ ಕೇಳಿಕೊಳ್ಳುತ್ತೇನೆ.

4–30 P. M.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದೊಡ್ಡ ನೀರಾವರಿಗೆ ಅವಕಾಶವಿಲ್ಲ. ಸಣ್ಣ ನೀರಾವರಿ ಯೋಜನೆಗಳನ್ನು ಮಾಡಬೇಕೆಂದು ಹೇಳುತ್ತಿದ್ದೇನೆ. ಇದು ಸಾಕಷ್ಟು ಆಗಲೇ ಇಲ್ಲ. ನನ್ನ ಕ್ಷೇತ್ರದಲ್ಲಿ ಎರಡು ಮೂರು ಸಣ್ಣ ನೀರಾವರಿ ಯೋಜನೆಗಳಿಗೆ ಅವಕಾಶವಿದೆ. ಕೊಣಾಜೆ, ಬೆಳ್ಮ ತೋಡಿನ ದುರಸ್ತಿ, ಕೊಳಚೆಕಾರ್ ಉಚ್ಚಿಲ ತೋಡಿನ ದುರಸ್ತಿಯಿಂದ ನೀರಾವರಿ ಯೋಜನೆ. ಅವುಗಳನ್ನು ಪೂರೈಸಿದರೆ ೧೦–೧೫ ಸಾವಿರ ಮುಡಿ ಅಕ್ಕಿ ಜಾಸ್ತಿಯಾಗುತ್ತದೆ ಎಂದು ಇಂಜಿನಿಯರುಗಳು ಹೇಳಿದ್ದಾರೆ. ಒಂದು ವೇಳೆ ಅಭಾವ ಬಂದರೂ ಅದನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ವಿಚಾರದ ಕಡೆಗೆ ಸರ್ಕಾರ ಲಕ್ಷ್ಯ ಕೊಡಬೇಕು.

೨೭ನೇ ಡಿಮಾಂಡ್‌ನಲ್ಲಿ ಬೆಂಗಳೂರು ಹಾಲಿನ ಡೈರಿ ವಿಚಾರ ಹೇಳಿದ್ದಾರೆ. ಇದು ಬಹಳ ಸಂತೋಷ. ಅದೇ ರೀತಿ ಇನ್ನು ಇತರ ಕಡೆಗೂ ಆಗಬೇಕಾದ ಕೆಲಸಗಳನ್ನು ಮಾಡಬೇಕು. ಮಂಗಳೂರಿನಲ್ಲಿ ಕುಲಶೇಖರ ಎಂಬಲ್ಲಿ ಹಾಲಿನ ಡೈರಿಗಾಗಿ ಕಟ್ಟಡಗಳಾಗಿವೆ, ಯಂತ್ರಗಳು ಬಂದಿವೆ. ಎರಡು ವರ್ಷದಿಂದ ಹಾಗೆಯೇ ಇದೆ, ನೀರಿನ ಪೂರೈಕೆ ಇಲ್ಲ ಎನ್ನುವ ಕಾರಣದಿಂದ ಏನೂ ಕ್ರಮ ತೆಗೆದುಕೊಂಡಿಲ್ಲ. ನೀರು ಪೂರೈಕೆಗೆ ಬೇಕಾದ ಕ್ರಮ ಹಾಕಿಕೊಂಡು ನೀರು ದೊರಕುವ ಹಾಗೆ ಮಾಡಿ ಹಾಲಿನ ಡೈರಿ ಸರಿಯಾದ ರೀತಿಯಲ್ಲಿ ಕೆಲಸ ಮಾಡುವಂತೆ ಕ್ರಮ ತೆಗೆದುಕೊಂಡರೆ ಅದರಿಂದ ಜನರಿಗೆ ಬಹಳಮಟ್ಟಿಗೆ ಒಳ್ಳೆಯದಾಗುತ್ತದೆ.

೧೭ನೇ ಡಿಮಾಂಡಿನಲ್ಲಿ ಎಕ್ಸ್‌ಪೋ-೭೦ರ ಸಂಬಂಧದಲ್ಲಿ ಹಣ ಕೇಳಿದ್ದಾರೆ. ಇದು ಒಂದು ಒಳ್ಳೆಯ ವಿಚಾರ, ಹಣ ಖರ್ಚಾದದ್ದು ನಿಜವಾದರೂ ಅದರ ಉದ್ದೇಶ, ಅದರ ಪರಿಣಾಮ ಕೆಟ್ಟದ್ದಲ್ಲ. ಇಡೀ ಜಗತ್ತಿನ ಬೇರೆ ಬೇರೆ ದೇಶದ ಜನಗಳು ವಿಚಾರವನ್ನು ತಿಳಿದುಕೊಳ್ಳಲು ಪ್ರಗತಿಪರವಾದ ಎಕ್ಸ್‌ಪೋ-೭೦ಕ್ಕೆ ಹೋಗಿದ್ದಾರೆ. ನಮ್ಮ ಮುಖ್ಯ ಮಂತ್ರಿಗಳು ಕೂಡ ಹೋಗಿದ್ದರು. ನಮ್ಮ ಅಧಿಪತ್ಯದಿಂದ ಕೆಲವರು ತರುಣರು ಹೋಗಿ ಅಲ್ಲಿನ ವಿಚಾರಗಳನ್ನು ಕಲಿತುಕೊಂಡು ಬಂದು ನಮ್ಮಲ್ಲಿ ಸಹಾಯ, ಸಹಕಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಸದುದ್ದೇಶದಿಂದಲೇ ನಮ್ಮ ರಾಜ್ಯದಿಂದ ಕೆಲವರನ್ನು ಕಳುಹಿಸಿದ್ದಾರೆ. ಒಂದು ದೃಷ್ಟಿಯಿಂದ ನೋಡಿದರೆ ಒಳ್ಳೆಯ ವಿಚಾರಕ್ಕೆ ಅವರನ್ನು ಕಳುಹಿಸಿದ್ದಾರೆ. ಆಯ್ಕೆಯಲ್ಲಿ ಹೆಚ್ಚು ಕಡಿಮೆಯಾಗಿದೆ ಎಂದು ಅನೇಕರು ಅನೇಕ ರೀತಿಯಿಂದ ಹೇಳಿದರೂ ಕೂಡ ಹೆಚ್ಚು

(ಶ್ರೀ ಬಿ. ಎಂ. ಇದಿನಬ್ಬ)

ಕಡಿಮೆಯಾಗಿಲ್ಲ ಎಂದು ಮಂತ್ರಿಗಳು ವಿಶದವಾಗಿ ಹೇಳುವಾಗ ಇದು ಒಳ್ಳೆಯ ವಿಚಾರ ಎಂದು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಇದರ ಪರಿಣಾಮ ಹೇಗೆ ಎನ್ನುವುದು ಮುಂದೆ ನೋಡಬೇಕಾದ ವಿಚಾರ.

ಡಿಮಾಂಡ್ ೫೩, ಮೀನುಗಾರಿಕೆ ವಿಚಾರದಲ್ಲಿ ಕೂಡ ಇನ್ನೂ ಹೆಚ್ಚು ಗಮನ ಕೊಡಬೇಕು. ಇದು ನಮ್ಮ ಅಧಿಪತ್ಯವನ್ನು ರಕ್ಷಿಸತಕ್ಕ ಇಲಾಖೆ. ಇದಕ್ಕೆ ಉತ್ತು, ಬೇಸಾಯ ಮಾಡಬೇಕಾದ್ದಿಲ್ಲ, ಮಳೆ ಬರಬೇಕಾಗಿಲ್ಲ, ಎತ್ತುಗಳು ಬೇಕಾಗಿಲ್ಲ. ನಿಸರ್ಗದತ್ತವಾಗಿ ದೇವರ ಕೃಪೆಯಿಂದ ಬಂದಿರುವ ವರಪ್ರಸಾದ. ಕರಾವಳಿಯ ಸಮುದ್ರದಲ್ಲಿ ಕೋಟಿಗಟ್ಟಲೆ ಟನ್ನು ಮೀನು ಯಾವತ್ತಿಗೂ ಇರುತ್ತದೆ. ಅದನ್ನು ಹಿಡಿದು, ನಮ್ಮ ಜನರಿಗೆ ಹಂಚಿ, ಆರ್ಥಿಕ ಸಂಪತ್ತನ್ನು ಬೆಳೆಸಿಕೊಳ್ಳುವ ಬುದ್ಧಿವಂತಿಕೆಯನ್ನು ಮಾಡಿಕೊಳ್ಳದೆ ಇದ್ದರೆ, ನಾವು ಬುದ್ಧಿವಂತರು ಎಂದು ಹೇಳುವುದರಿಂದ ಏನೂ ಪ್ರಯೋಜನವಿಲ್ಲ. ಒಳನಾಡಿನಲ್ಲಿ ಮೀನಿನ ಮರಿಗಳನ್ನು ಹಾಕಿ, ಅವುಗಳನ್ನು ಬೆಳೆಸಬೇಕು. ಆದರೆ ಸಮುದ್ರದಲ್ಲಿ ಯಾವತ್ತಿಗೂ ಮೀನು ಇರುತ್ತದೆ. ಆಳವಾದ ಸಮುದ್ರಕ್ಕೆ ಹೋಗುವಂಥ ದೋಣಿಗಳು ಹೆಚ್ಚಾಗಿ ಬೇಕು. ಈಗ ೮೦೦ ಯಂತ್ರಚಾಲಿತ ದೋಣಿಗಳಿವೆ. ಅವು ಅಷ್ಟು ಆಳವಾದ ದೂರ ಸಮುದ್ರಕ್ಕೆ ಹೋಗುವುದಕ್ಕಾಗುವುದಿಲ್ಲ. ೮೦೦ ದೋಣಿಗಳಲ್ಲಿ ಬೇಕಾದಷ್ಟು ಮೀನು ಹಿಡಿಯುತ್ತಾರೆ, ಬೇಕಾದಷ್ಟು ಶೀತಲ ಗೃಹಗಳು, ಐಸ್ ಫ್ಯಾಕ್ಟರಿಗಳು ಕರಾವಳಿಯಲ್ಲಿ ಆಗಿವೆ. ಅದರ ಪ್ರಯೋಜನವನ್ನು ಜನ ಪಡೆಯುತ್ತ ಇದ್ದಾರೆ. ಇವುಗಳ ಜೊತೆಗೆ ಮೀನುಗಾರಿಕೆಗೆ ಇನ್ನೂ ಹೆಚ್ಚು ಹಣ ಕೊಟ್ಟು ಅದರಿಂದ ಆಗುವಂಥ ಆರ್ಥಿಕ ಪ್ರಗತಿಗೆ ಸರ್ಕಾರ ಗಮನ ಕೊಡಬೇಕು.

೪೪ನೇ ಡಿಮಾಂಡಿನಲ್ಲಿ ಕೈಗಾರಿಕೆಗಳ ವಿಚಾರ ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ವಿಚಾರ ಹೇಳುವುದಾದರೆ ಹಂಚಿನ ಕಾರ್ಖಾನೆ ಬಹಳ ಪ್ರಸಿದ್ಧವಾದುದು. ೧೦೦-೧೫೦ ವರ್ಷಗಳಿಂದ, ಪ್ರಸಿದ್ಧವಾಗಿದ್ದು, ಬಹಳ ಜನರ ಪ್ರೀತಿಪಾತ್ರಗಳಿಗೆ ಪಾತ್ರವಾದುದು ಮಂಗಳೂರು ಹಂಚು. ದೇಶವಿದೇಶಗಳಿಂದಲೂ ಕೀರ್ತಿಯನ್ನು ಪಡೆದಿತ್ತು. ಅಂಥ ಹಂಚಿನ ಕಾರ್ಖಾನೆಗಳು ಇಂದು ಮುಚ್ಚುವಂಥ ಪರಿಸ್ಥಿತಿ ಬಂದಿದೆ. ಐದಾರು ಕಾರ್ಖಾನೆಗಳನ್ನು ಮುಚ್ಚಿದ್ದಾರೆ ಮತ್ತು ಇತರೆ ಕಾರ್ಖಾನೆಗಳು ಮುಚ್ಚುವ ಸ್ಥಿತಿಯಲ್ಲಿವೆ. ಈಚೆಗೆ ಪ್ರಾವಿಡೆಂಟ್ ಫಂಡ್ ಕೊಡಬೇಕಾದ ಕಾನೂನು ಬಂದಿರುವುದರಿಂದ, ಅದನ್ನು ಕೊಡುವುದಕ್ಕೆ ಆಗದೆ ಹಂಚಿನ ಕಾರ್ಖಾನೆಯವರು ಸೋತಿದ್ದಾರೆ. ಇಂಥ ಪ್ರಸಿದ್ಧ, ಶತ ಶತಮಾನಗಳಿಂದ ಕೀರ್ತಿಯನ್ನು ಗಳಿಸಿರತಕ್ಕ ದೊಡ್ಡ ಉದ್ಯಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದು ಅದನ್ನು ಈಗ ಉಳಿಸತಕ್ಕ ಸಂದರ್ಭ ಬಂದಿದೆ. ಹಂಚಿನ ಕಾರ್ಖಾನೆಗಳನ್ನು ಮುಚ್ಚಿದರೆ ಸಾವಿರಾರು ಮಂದಿ ನಿರುದ್ಯೋಗಿಗಳಾಗಬೇಕಾಗುತ್ತದೆ. ಇದನ್ನು ಕೂಡ ಸರ್ಕಾರ ಗಮನದಲ್ಲಿಟ್ಟುಕೊಂಡು, ಸರ್ಕಾರ ಸಹಾಯ ಹಸ್ತವನ್ನು ನೀಡಿ ಅವರು ಸೋತುಹೋಗದಂತೆ ಸಹಾಯ ಮಾಡಿದರೆ ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರವಲ್ಲ ನಮ್ಮ ರಾಜ್ಯಕ್ಕೇ ಒಳ್ಳೆಯದಾಗುತ್ತದೆ ಎಂದು ಹೇಳುತ್ತಿದ್ದೇನೆ.

೩೮ನೇ ಡಿಮಾಂಡ್‌ನಲ್ಲಿ ಖೆಡ್ಡ ವಿಚಾರವಿದೆ. ಇದು ಒಳ್ಳೆಯದು. ಅದನ್ನು ಪ್ರತಿ ವರ್ಷ ಮಾಡುವುದಕ್ಕಿಂತ ಯಾವಾಗಲಾದರೂ ಒಮ್ಮೆ, ಐದು ಅಥವಾ ಹತ್ತು ವರ್ಷಕ್ಕೆ ಒಮ್ಮೆ ಮಾಡಿದರೆ ಒಳ್ಳೆಯದು. ಇದರಲ್ಲಿ ಖರ್ಚಾಗುವ ಹಣ ಹಿಂದಕ್ಕೆ ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಪರದೇಶಗಳಿಂದ ಬರುವವರು, ಮತ್ತು ಇತರರು ಇದನ್ನು ನೋಡಿ ಮೋಜಿನಲ್ಲಿ ಕಾಲ ಕಳೆಯಬಹುದು; ಜನರಿಗೆ ಅದನ್ನು ನೋಡುವುದರಿಂದ ಸಂತೋಷವಾಗಬಹುದು. ಆದರೆ ಪ್ರತಿ ವರ್ಷ ಇದನ್ನು ಮಾಡುವುದು ಒಳ್ಳೆಯದಲ್ಲ. ಇದು ಖರ್ಚನ್ನು ತರುತ್ತದೆ ಎಂದು ಹೇಳುತ್ತೇನೆ. ಇದರ ಬದಲು ಈ ಖೆಡ್ಡವನ್ನು ಕಳಸಂತೆ ಮಾಡತಕ್ಕ ಜನರು ಇನ್‌ಕಂಟ್ಯಾಕ್ಸ್ ಕೊಡದ ಜನರು, ಸೇಲ್ಸ್ ಟ್ಯಾಕ್ಸ್ ಕೊಡದ ಜನರು, ಏನಿದ್ದಾರೆ, ಅಂತಹ ಆನೆಗಳನ್ನು ಹಿಡಿದು ಹಾಕುವುದಕ್ಕೆ ಮಾಡಿಕೊಂಡರೆ ಸರ್ಕಾರಕ್ಕೆ ಹೆಚ್ಚು ಹಣ ಬರುವುದಲ್ಲದೆ ಜನರಿಗೂ ಒಳ್ಳೆಯದಾಗಬಹುದು.

ನಾನು ಇದುವರೆಗೆ ಅರಿಕೆ ಮಾಡಿಕೊಂಡು ದಕ್ಷಿಣ ಕನ್ನಡ ಜಿಲ್ಲೆಯ ವಿಷಯಕ್ಕೆ ಹೆಚ್ಚಿನ ಗಮನ ಕೊಡಬೇಕು ಅಲ್ಲಿನ ಕೆಲಸದ ಕಡೆ ಗಮನ ಕೊಡಬೇಕು, ಹೆಚ್ಚಿನ ನೀರಾವರಿ ಯೋಜನೆಗಳ ಕಡೆಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ನೇತ್ರಾವತಿ ಮತ್ತು ಕುಮಾರಧಾರ ನದಿಗಳಿಂದ ನೀರನ್ನು ತೆಗೆಯಬಾರದು, ಪಂಪ್‌ಸೆಟ್ ಉಪಯೋಗಿಸಬಾರದು ಎನ್ನುವ ಕಾನೂನು ಬಂದಿದೆ. ಇದರಿಂದ ನದಿ ದಡದಲ್ಲಿದ್ದ ರೈತರು ಅಲ್ಲೋಲ ಕಲ್ಲೋಲರಾಗಿದ್ದಾರೆ. ಈಗ ಅವರೆಲ್ಲ ಪಂಪ್‌ಸೆಟ್ ಇಟ್ಟುಕೊಂಡು ಕೃಷಿ ಮಾಡುತ್ತಿದ್ದಾರೆ. ಇಂಥವರು ಪಂಪ್‌ಸೆಟ್ ಇಡಬಾರದು, ನೀರನ್ನು ತೆಗೆಯಬಾರದು, ನದಿ ನೀರನ್ನು ಮುಟ್ಟಬಾರದು ಎಂದು ಸರ್ಕಾರ

ಕಾನೂನು ಮಾಡಿದ್ದರಿಂದ ಅವರು ಅಲ್ಲೋಲ ಕಲ್ಲೋಲ ಪರಿಸ್ಥಿತಿಯಲ್ಲಿದ್ದಾರೆ ಮತ್ತು ಅವರು ಸತ್ಯಾಗ್ರಹ ಮಾಡತಕ್ಕ ಪರಿಸ್ಥಿತಿಯಲ್ಲಿದ್ದಾರೆ. ಬಂಟವಾಳದಲ್ಲಿ ಪಂಪ್‌ಸೆಟ್ ಇಟ್ಟುಕೊಂಡಿರುವವರು ಸಂಘ ಸ್ಥಾಪನೆ ಮಾಡಿದ್ದಾರೆ ಮತ್ತು ಸತ್ಯಾಗ್ರಹ ಮಾಡುವಂಥ ವಿಚಾರದಲ್ಲಿದಾರೆಂದು ಶಾಸಕರಿಗೆ ತಿಳಿಸಿದ್ದಾರೆ. ಸರ್ಕಾರ ಪಂಪ್‌ಸೆಟ್ ಇಟ್ಟವರಿಗೆ ತೊಂದರೆ ಮಾಡದೆ ನದಿ ನೀರನ್ನು ತೆಗೆದುಕೊಳ್ಳುವಹಾಗೆ ಅನುಮತಿ ಕೊಡಬೇಕು. ಆಹಾರದ ಪರಿಸ್ಥಿತಿಯಲ್ಲಿ ಒಳ್ಳೆಯದಾಗಲು, ಆಹಾರ ಹೆಚ್ಚು ಬೆಳೆಸಲು ಇಥ ಪಂಪ್‌ಸೆಟ್‌ಗಳಿಂದ ಉಪಕಾರವಿದೆ. ಅಂಥ ಪಂಪ್‌ಸೆಟ್‌ಗಳನ್ನು ಇಡಬಾರದು, ನದಿಯಿಂದ ನೀರು ತೆಗೆದುಕೊಳ್ಳಬಾರದು ಎನ್ನುವ ಪರಿಸ್ಥಿತಿ ಬಂದರೆ ಸುಬ್ರಹ್ಮಣ್ಯದಿಂದ ಮಂಗಳೂರಿನವರೆಗೆ, ಅದೇ ರೀತಿ ನೇತ್ರಾವತಿ ಉಗಮದಿಂದ ಮಂಗಳೂರಿನವರೆಗೆ ಇರತಕ್ಕ ರೈತರು ಕಷ್ಟದ ಪರಿಸ್ಥಿತಿಯಲ್ಲಿ ಬೀಳುತ್ತಾರೆ ಎಂದು ಸರ್ಕಾರದ ಗಮನಕ್ಕೆ ತಂದು ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ತಮಗೆ ವಂದನೆಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಚಂಪಾಬಾಯಿ ಭೋಗಲೆ (ಕಾಗವಾಡ):—ಅಧ್ಯಕ್ಷರೇ, ನಮ್ಮ ಮುಂದಿರುವ-ಸಪ್ಲಿಮೆಂಟರಿ ಬಜೆಟ್ಟನ್ನು ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ಸರಕಾರ ಈಗ ಬೇಕಾದಷ್ಟು ಯೋಜನೆಗಳನ್ನು ಮಾಡಿದೆ, ಅವು ಕಾರ್ಯರೂಪಕ್ಕೆ ಬರಬೇಕಾಗಿದೆ. ಉತ್ತರ ಕರ್ನಾಟಕದ ಸುಪಾ ತಾಲೂಕಿನ ಆರೋಗ್ಯ ಇಲಾಖೆ ವಿಚಾರ ತೆಗೆದುಕೊಂಡರೆ ಗುಂಡ ಎಂಬ ಊರಿನಲ್ಲಿ ೫ ವರ್ಷಗಳಿಂದ ಆಸ್ಪತ್ರೆಯಿದ್ದರೂ ಡಾಕ್ಟರಿಲ್ಲ, ನರ್ಸಿಲ್ಲ, ಟೇಬಲ್‌ಇಲ್ಲ ಜನ ಸಂಖ್ಯೆಯಿಲ್ಲಿ ಹುಲಿ ಕರಡಿ ವಾಸಿಸುವ ಸ್ಥಳದ ಲ್ಲಿ ರೋಡು ಸಹ ಇರುವುದಿಲ್ಲ. ಈ ವಿಚಾರ ಆಗಾಗ್ಗೆ ಸರ್ಕಾರದ ಗಮನಕ್ಕೆ ತರುತ್ತಲೇ ಇದ್ದೇವೆ ಅಥಣಿ ತಾಲೂಕಿನ ಸೇಗುಣಸಿ ಗ್ರಾಮದ ಸುತ್ತು ಕೃಷ್ಣಾ ನದಿಯು, ಹರಿಯುವುದು, ನಾಲ್ಕು ತಿಂಗಳವರೆಗೆ ಹೊರಗೆ ಹೋಗುವುದಕ್ಕಾಗುವುದಿಲ್ಲ, ತೊಂದರೆಯಾಗಿದೆ. ೫ಸಾವಿರ ಜನರೇನು ಅಲ್ಲಿದ್ದಾರೆ, ಅಲ್ಲಿ ದವಾಖಾನೆಯನ್ನು ತೆಗೆಯದಿದ್ದರೆ ೧೨ಮೈಲಿ ದೂರ ಹೋಗಿ ವೈದ್ಯಕೀಯ ಸೌಲಭ್ಯ ಪಡೆಯಬೇಕಾಗುವುದು. ಆದುದರಿಂದ ತಕ್ಷಣ ಗುಂಡದ ದವಾಖಾನೆಯನ್ನು ಸೇಗುಣಸಿಗೆ ವರ್ಗಾಯಿಸಿ ಅಲ್ಲಿಗೆ ಡಾಕ್ಟರು ಮತ್ತು ನರ್ಸನ್ನು ಕಳಿಸಬೇಕು ಬೇರೆ ವ್ಯರ್ಥವಾಗಿ ಖರ್ಚುಮಾಡಬಾರದು, ಮತ್ತು ಸೇಗುಣಸಿ ಜನರಿಗೆ ಅನುಕೂಲ ಮಾಡಿ ಕೊಡಬೇಕಾಗಿ ವಿನಂತಿ.

ಉದ್ಯೋಗ ದಂಧೆ ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಅನೇಕ ಇದೆ, ಅರಣ್ಯವಿದೆ, ಕೈಗಾರಿಕೆ ಸ್ಥಾಪಿಸಲು ಅವಕಾಶವಿದೆ, ಕೂಲಿಯ ಸಲುವಾಗಿ ಜನರಿಗೆ ಸಣ್ಣ ಸಣ್ಣ ಕೈಗಾರಿಕೆ ಸ್ಥಾಪನೆ ಮಾಡಬೇಕು, ಅದು ಬಾರ್ಡರ್ ಏರಿಯಾ, ಸಣ್ಣ ಸಣ್ಣ ಕೈಗಾರಿಕೆ ಸ್ಥಾಪನೆಮಾಡಿದರೆ ಎಷ್ಟೋ ಜನರಿಗೆ ಕೆಲಸ ಸಿಕ್ಕುವುದು. ದಾಂಡೇಲಿಯಲ್ಲಿ ಸುಮಾರು ನೂರು ಜನರ ಅರ್ಜಿ ಹಾಕಿ ೫ ವರ್ಷವಾಯ್ತು, ಫಾರೆಸ್ಟ್ ಜಮೀನನ್ನು ಅವರು ಕೇಳಿದ್ದಾರೆ, ಆದರೆ ಕೊಟ್ಟಿರುವುದಿಲ್ಲ. ಸೊಸೈಟಿಯವರು ಹೇದಳಿರೂ ಕೂಡ ಕೊಟ್ಟಿಲ್ಲ ಅಲ್ಲಿ ಹೆಚ್ಚು ಹರಿಜನರಿದ್ದಾರೆ, ಅವರಿಗೆ ಅನುಕೂಲಮಾಡಿ ಕೊಡುವುದು ಸರಕಾರದ ಕರ್ತವ್ಯ. ಅನೇಕರಿಗೆ ಎರಡು ಗುಂಟೆ ಭೂಮಿ ಕೂಡ ಇಲ್ಲ. ಅಂಥ ಪರಿಸ್ಥಿತಿಯಿರುವಾಗ ಸರ್ಕಾರ ಸಾಕಷ್ಟು ಸೌಕರ್ಯ ಮಾಡಿಕೊಬೇಕು ಅವರ ಕಡೆಗೆ ಲಕ್ಷ ಕೊಡಬೇಕು. ಈಗ ಬ್ಯಾಂಕುಗಳು ಸಾಲ ಕೊಡುವುವು. ಆದರೆ ಹರಿಜನರಿಗೆ ಅದು ಸಿಕ್ಕುತ್ತಿಲ್ಲ. ಇದರಿಂದ ಅವರಿಗೆ ಬಹಳ ಅನ್ಯಾಯ ಆಗಿದೆ. ಸಣ್ಣ ಕೈಗಾರಿಕೆಗಳಿಗೆ ಸಹಾಯಧನ ಮಂಜೂರು ಮಾಡಿ ಹರಿಜನರ ಏಳಿಗೆಗೆ ಅವಕಾಶಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇರಿಗೇಷನ್ ಕಡೆಗೆ ಸಾಕಷ್ಟು ಲಕ್ಷ ಕೊಡಬೇಕು ಹಾಗೆ ಮಾಡಿದರೆ ರೈತರ ಕಲ್ಯಾಣವಾಗುವುದು. ಮುಖ್ಯವಾಗಿ ವಿದ್ಯುಚ್ಛಕ್ತಿ ಅನುಕೂಲ ಇರಿಗೇಷನ್ನಿಗೆ ಬೇಕು. ಅದಿಲ್ಲದೆ ರೈತರಿಗೆ ಅನುಕೂಲವಾಗುವುದಿಲ್ಲ. ನೀರಾವರಿ, ವಿದ್ಯುಚ್ಛಕ್ತಿ ಮತ್ತು ಉದ್ಯೋಗದ ಸಲುವಾಗಿ ಸಾಕಾದಷ್ಟು ಖರ್ಚುಮಾಡಬೇಕು. ಅದಕ್ಕಾಗಿ ಸಾಲ ಮಾಡಿದರೂ ಚಿಂತೆಯಿಲ್ಲ. ದೇಶದ ಏಳಿಗೆಯ ಸಲುವಾಗಿ ಪ್ರಯತ್ನಮಾಡಬೇಕು. ನಮ್ಮ ಕಡೆ ಹೆಚ್ಚು ಅಭಾವ ಪ್ರದೇಶವಿದೆ, ಎರೆ ಭೂಮಿ ಇದೆ, ಅಲ್ಲಿ ರಸ್ತೆ ಸಾಕಷ್ಟಿಲ್ಲ, ೨೫ ವರ್ಷಗಳಿಂದ ಒಂದು ರಸ್ತೆಕೂಡ ಆಗದೆ ತೊಂದರೆಯಾಗಿದೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಿ ಬರಲು ತೊಂದರೆ ಯಾಗಿರುವುದರಿಂದ ಹೆಚ್ಚು ರಸ್ತೆಗಳನ್ನು ಮಾಡಬೇಕು. ಕುಡಿಯುವ ನೀರಿನಸಲುವಾಗಿ ಗ್ರಾಮ ಪಂಚಾಯತಿಯವರಿಗೆ ಹತ್ತಿಪ್ಪತ್ತು ಸಾವಿರ ತುಂಬಬೇಕೆಂದು ಹೇಳುವರು. ಆ ರೀತಿ ತುಂಬಿದರೂ ಸೌಕರ್ಯ ಮಾಡಿಕೊಡುತ್ತಿಲ್ಲ. ದಯೆಯಿಟ್ಟು ಇದನ್ನು ಸ್ಪೆಷಲ್ ಕೇಸ್ ಎಂದು ಭಾವಿಸಿ ಕುಡಿಯುವ ನೀರಿಗೆ ಮೊದಲು ಅನುಕೂಲ ಮಾಡಿಕೊಡಬೇಕು. ನಮ್ಮ ತಾಲ್ಲೂಕಿನಲ್ಲಿ ಮೂರು ವರ್ಷಗಳಿಂದ ೨೦ ಸಾವಿರ ರೂಪಾಯಿಗಳನ್ನು ನೀರು ಸರಬರಾಜಿಗೆ ಗ್ರಾಮಗಳಿಂದ ತುಂಬುತ್ತಲೇ ಇದ್ದಾರೆ. ಒಮ್ಮೆ ತುಂಬಿದಮೇಲೆ ಮತ್ತೆ ಇಷ್ಟು ತುಂಬಬೇಕೆಂದು ಹೇಳುವರು. ಹಾಗೆ ಮಾಡಲು ಸಾಧ್ಯವಾಗುವುದಿಲ್ಲ. ಆ ರೀತಿ ಮಾಡದೆ ಸರಕಾರದವರೇ ಮುಂದೆ ಬಂದು ನೀರು ಸರಬರಾಜಿಗೆ ವ್ಯವಸ್ಥೆ ಮಾಡಬೇಕು.

(ಶ್ರೀಮತಿಚಂಪಾಬಾಯಿ ಭೋಗಲೆ)

ಈ ರೀತಿ ನೀರಿನ ಸೌಕರ್ಯಮಾಡಿಕೊಟ್ಟು ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ಭಾಗದಲ್ಲಿ ಕೆಲ ಕೆಲವು ಬ್ರಿಡ್ಜ್‌ಗಳು ಆಗಬೇಕಾಗಿವೆ. ಬ್ರಿಜ್ಡ್ ಸಲುವಾಗಿ ಬೊಂಬೆ ಸರ್ಕಾರದಲ್ಲಿದ್ದಾಗಲೂ ಕೂಡ ಅದಕ್ಕೆ ಸಾಕಾದಷ್ಟು ಪ್ಲಾನ್ ಎಸ್ಟಿಮೇಟು ಆಗಿ ಕಾರ್ಯಗತವಾಗದೆ ನಿಂತಿವೆ. ಅಲ್ಲಿನ ಜನರು ಈಗಲೂ ಕೂಡ ಅದರ ಸಲುವಾಗಿ ಬೆಂಗಳೂರಿನ ತನಕ ಬಂದು ತಮ್ಮ ಬೇಡಿಕೆಯನ್ನು ಪೂರೈಸಿಕೊಳ್ಳಬೇಕಾಗಿದೆ. ಇದು ಬಹಳ ಮಹತ್ವದ ಕೆಲಸ ಇದೆ. ಹೆಣ್ಣುಮಕ್ಕಳ ಕಡೆಗೆ ಹೆಚ್ಚು ಲಕ್ಷ್ಯ ಕೊಟ್ಟಾದರೂ ಕೂಡ ರಸ್ತೆ, ಇರಿಗೇಷನ್, ದವಾಖಾನೆ ಮತ್ತು ಎಲೆಕ್ಟ್ರಿಸಿಟಿ ಇವುಗಳ ಸೌಕರ್ಯವನ್ನು ಜನರಿಗೆ ಮಾಡಿಕೊಡಬೇಕೆಂದು ಹೇಳುತ್ತೇನೆ. ಈ ಬಗ್ಗೆ ಈಗಾಗಲೇ ಚೀಫ್ ಮಿನಿಸ್ಟರಿಗೆ ಬರೆದಿದ್ದೇನೆ. ಇವರ ಕಡೆಗೆ ಗಮನ ಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†SRI V. N. PATIL (HUMNABAD) :-Sir, While opposing these Supplementary Demands, I want to speak on some specific points, namely, waste of public money and how the Government is unworthy to put forward any more supplementary demands The Government does not deserve the sanction of any more Demands because the Demands already sanctioned remain misutilised and improperly utilised and there is even misappropriation to a certain extent.

This Government has advanced loans to some of the sick textile mills. which are those Mills? Those textile mills are in the heart of Bangalore City and they are the Maharaja and Minerva Mills and to them lakhs of rupees have been advanced from the State Exchequers. What is the result? A percentage of it has gone to the election funds of the Congress Party and the rest of the money has been misappropriated. That apart, these sick mills have been closed and 6,000 families have been starving for more than one year. In the name of saving the workers from unemployment timely loans are being advanced to these Mills for securing commission from the Mills Management. so people have lost faith in the Government. Therefore, we do not like the Appropriation or Supplementary Demands.

An indiscriminate spending tendency has developed in our Government. For instance, take Demand No. 26. For this Demand, Government want lakhs of rupees to give employment assistance and relief to the educated unemploped. By this scheme how are they going to solve the unemployment problem? The number of the unemployed is mounting and not a single word is mentioned in the Explanatory Note as to how the unemployment problem will be solved.

Whatever money has been sanctioned to Government, is going to waste. Hardly a month ago we saw a semi-blood bath in Bangalore City on account of wrong selection of delegates to "EXPO-70." When there was agitation against the manner of selection, the students were treated like flies and the skulls of some students were broken in the premises of the College Hostel and the Colleges. The students were

treated in the most uncivilised manner. Who is responsible for the damage caused to the Geology Department of the Central College and the loss sustained in the Geology Laboratory? Irreparable damage has been caused to the Geology Department Laboratory. It is all due to waste of public money over such a delegation. Is it not a reckless policy of the Government to treat the youth of the nation as mere smuggling agents? Whom have they selected for that EXPO? When we see the list of delegates, more often we cannot see the names of the candidates selected; we see their father's name. From a singly family 5 or 6 members have been selected to go to Japan. The selection of the team is full of nepotism and on a delegation which led to so much disturbance, Government has spent Rs 6 lakhs. Is Government a charitable institution to help their kith and kin? Is this an honest Government? Is such beneficence meant to serve as incentive for further practising smuggling and bribery? If these are the good things that Government is going to indulge in, hell with those things? Volumes can be written about the mis pending of money by Government.

There is a proverb in Hindi. Somebody asked a camel, which part of its body it could boast of and it could boast of none. The same question can be put to this Government also Which one of their acts they can boast of? In the Gandhi Centenary Year, Neither Land Reforms were implemented nor unemployment was solved. On the other hand, in this year we have tarnished the name of the Father of the Nation. we have not fulfilled a single aspiration of Mahatma Gandhi. They have acted contrary to his teachings. That they won't give effect to land reforms is a foregone conclusion; a go-by has been given to land reforms. In our State lot of acres of land are lying waste. More than 11 lakh acres are still to be released and distributed. For whom are they going to be distributed and when? If we immediately distribute all these 11 lakh acres, we can get 11 lakh tons of extra food. Is the Government propared to take up that challenge? In the name of Green Revolution, nothing is honestly done either to the word 'green' or to the word 'revolution. Every scheme has ended in tragedy, with the result people are forced to lose faith in this Government. The younger generation has completely lost faith in this Government and their leaders. The Government has failed to create a sense of national security and feeling in them. we hear sermons and lectures from our leaders. They are nothing but advice. Nothing is followed by them. It actually pains me to say that the Government has miserably failed in its performance and as such, it has no right to demand extra funds as the funds which are already placed at this disposal have remained unused or improperly used or misused. When such are the criticisms against them, they are not prepared to take them sportively and mend themselves.

(Sri V. N. PATIL)

I am going to bring to the notice of the House one of the most inhuman aspects of the Government. One of the Publicity Officers who served the Government for several years, started a newspaper by name "Daman.", because he saw nothing but corruption, flattery and squandermania in the Government. He was convinced that, it was impossible to expose these evils of Government while remaining in Government service. So he resigned and became a journalist and started a paper. His paper started exposing one after another the misdeeds of the Government. The Government then considered him the most and worst sinner. He attacked the Police Department in his paper as encouraging gambling dens, brothel houses and Iranis in Bidar District. These Iranis were running gambling dens and resorting to prostitution. He revealed in this paper that police officers used to get an illegal gratification of Rs. 5,000 per month, and that from the gambling dens and hotels they are getting Rs. 1,000 daily. The Police became panicky and they threatened him with dire consequences.

The editor did not surrender, they threatened him. But a journal list is a person who practies his journalism fearlessly and so he did not surrender to them. So within about a week's time one Sub-Inspector Laxman Rao along with 4 Constables threatened him. The Deputy Home Minister may say that it is not a fact because he had not received any complaint, but still I am making this charge with a full sense of responsibility that this Sub-Inspector Laxman Rao along with 4 Constables came to his door at dead of night, forced open his door like a devil and used abusive language against him for over 3 hours. At last the journalist became panicky and sought police help which was sent to him not then, but the next morning. The next morning they threatened him that his legs will be chopped off, his hands will be cut, etc. As if that was not enough, the police managed to send one Narayanaswamy who is a hotel owner and who is a person drinking all the 24 hours. This Narayanaswamy went before the house of this journalist and used Vulgar and abusive languages against the journalist and his wife. This Narayanaswamy even said that he would see that this journalist was cut to pieces. All this was managed by the S. P. because he wanted to save his face from being exposed. This journalist was also beaten very severely by this Narayanaswamy. Then this poor man was taken by the S.P to a doctor who was alsoin league with the police. This doctor would not certify that this Narayana-swamy was smelling liquor even though the foul small of liquor was coming out of his mouth all the 24 hours. This will show what kind of protection the police gives to the innocent people. There is no security in this State for the honest and innocent persons. Tomorrow they will do the same thing to me. But they should remember that the voice of the people can never be suppressed. They are doing injustice only to themselves. Let them remember that their Doomsday is fast approach ing when they will be liquidated completely.

5-00 P.M.

SRI RAMAKRISHNA HEGDE:- Liquidation takes place only in Communist Countries.

SRI V. M, PATIL:—You have been trying to liquidate the people and the voice of the people all these years, but you must remember that nearly one-third of the world has today become Communist with the red flag flying in their Countries. India also will soon join that fold and embrace that ideology and hoist the red flag.

Now I want to make some concrete suggestions for the Government to implement. According to the Government in Bidar District today there are about 11 lakh acres of Government waste land available for distribution. You have appointed an all-party committee talukwise for distribution of this waste land. According to your figures, the land available for distribution is 11lakh acres, but according to us it is more than 22 lakh acres. There is sufficient manpower in the district and if all these lands are properly distributed to these people they will be able to develop these lands and increase food production in the Country. I am glad the Revenue Minister is here. I hope he will see to it that those who are in possession of Government wast lands for over 5 to 10 years are not dispossessed of these lands, but the lands are confirmed in their names irrespective of the Colour or the political party to which they belong. This will help these people to cultivate these lands in a proper manner and increase out food production.

Then, Sir, most of the lands in our State are held by religious and charitable institutions These lands have become a liability. Every year the Deputy Commissioners auction the right to hold these lands and every year these lands will be changing hands with the result that nobody is realy insterested in developing these lands and making them more fertile by applying manures and fertilizers because he knows that the land is not going to remain with him the next year. It is, therefore, very necessary that all these lands belonging to religious and charitable institutions should be acquired by Government so that in future patta rights could be granted to the actual cultivators of those lands. If you do this, you will be doing a yeoman service to the poor tenants and you will be doing a good service to the ideals for which Gandhiji lived. In the name of Gandhiji I am appealing to you to do this.

I have one more suggestion to make. Lot of atrocities are committed by the police officers. Most of the police officers in private conversation with us say that they are not interested in committing atrocities, but they are helpless as they have to act upon secret orders which they receive. They were mercilessly beating the land grab Satyagrahis. Even from these poor Satyagrahis these police officers

(Sri V. M. PATIL)

were demanding from Rs. 25 to 50 for releasing them from custody. If this is the type of treatment meted out to the Satyagrahis, I do not knowwhat an inhuman treatment will be meted out to other offenders. Police officers are misused for political power and for continuing in office. I would appeal to them, please do not misuse the police people.

Lastly, I want to say something about the selection for *Expo-70* team from my district. The Deputy Commissioner was asked to recommend names in the serial order according to first preference, second prefer nce, etc. But all these names and preferences were thrown to the waste paper basket and some altogether unknow names were inserted by the Government. I do not know from where they discovered these names. Most of the members sent from my district in this delegation are neither talented people nor businessmen nor young Industrialists, but they are Chandus who are known as tout.

Those who were subserving the inteterts of the Ministers and some leaders were imported over night just like in rainy season we get ಮಳೆ ಹುಳುಗಳು and sent to Japan. It is a sin to call them as leaders. One gentleman by name Nichal Singh from Bidar, who has nothing to his a brother of a rich contractor who gives lakhs of rupees to the Congress fund during elections, was sent as a delegate to Japan. He remains in Andhra Pradesh, nobody has seen him in Bidar district, no school or College has got his name in Bidar ; no Youth Organisation in Bidar has got his name. Of course, our Deptuy Home Minister might know him.

SRI M. NAGAPPA :—Was that name recommended by the Deputy Home Minister ?

SRI. V. N. PATIL :—I do not know that There are several groups in their own Party.

Sir, five school teachers did not get their pension amount settled even after five years of their death.

The official currency that has been spent on this *Expo-70* is Rs.6 lakhs. I do not know the details about the unofficial currency We saw reports that they had hidden some currency in their shoes and so on. Every individual might have spent not less than Rs. 1,000 in Japan. So, the total expenditure comes to Rs. 10 lakhs in this affair. What is the gain to our State by this expenditore ? To my question as to with whose permission that amount was spent, there was no reply. The list was supplied to us in an unashamed manner-if I use a stronger word, the Chair may not appreciate it I would like to know from the Hon Finance Minister ಇವರು ಎಕ್ಸ್‌ಪೋಗೆ ಹೋದಂಥವರ ಅಪ್ಪನ ಹೆಸರನ್ನು

ಬರೆಯಬೇಕಾಗಿತ್ತು. ಅಪ್ಪನ ಹೆಸರು ಬರೆಯದಿದ್ದರೆ, ಅವನು ಬೇವರ್ಸಿಯೇ ? ಒಬ್ಬ ಸಿಂಗಲ್ ಪರ್ಸನ್ನಿನ ಫಾದರ್ಸ್ ನೇಮ್ ಇಲ್ಲ They have not given a single person's father's name. Is it not an insult to them ? I do not know why such an insulting attitude was taken.

SRI RAMAKRISHNA HEGDE (Minister for Finance) :—Normally name and addresses are given, and in this the list the names of the candidates who have been selected with their addresses have been given. If the Hon Member wa ts the father's name and even the grand-father's name ? I will collect the info mation and furnish the same to the Hon. Member.

SRI V. N. PATIL ;—The question is about the integrity of the persons selcted. It is not a question of how many relatives of mine or the Finance Minister have gone. I have nothing against the persons who have gone. But, the method of selection is most reckless. I should say that the Hon .Minister concerned and the Min stery have utterly failed in their duty with regard to this selection.

Finally, I would like to bring to the notice of the Hon. Revenue Minister one thing. In most of the Hyderabad-Karnatak area, particularly in Bidar, Gulbarga and Raichur districts, people have lost hope about the cultivation of jawar. The condition is very pathetic. In this area 40-50 per cent of the land is rearmaked for jawar cultivation. On account of heavy rains, it is not possible even to cultivate the rabi jawar in these. areas If the cuitivation is not undertaken within another 3 or 4 day definitely these order is going to be famine and it will be very dificult for people to face it Let the Government come for-ward with some alternative proposals like giving free seeds,free pestisides, stopping the collection of Takave and other loans for at least one year, remission of land revenue for the affected areas, etc. I think this is not an unreasonable demand to help the poor and down trodden. If the Government do not insist upon recovery of takavi and other loans, they will be doing a yeomen service, and if the greatest sin on all of us.

About the land grab movement by the Communist Party and other parties in Bidar district, I request the Government not to take it as a prestige issue. The land has been grabbed as the Government failed to distribute that land in time. It is only the sense of responsibility that has to be inpused in the Government for the distribution of land. Otherwise, there will be a Satyagraha movement. They will be doing 4 great dis-service to the State if the ministerial powers are mis-used with regard to the standing crops that are there on those lands. If the ministerial powers are mis-used, they will be commiting a greater sin than even cow slaughter.

With these words, I thank the Chair.

† ಶ್ರೀ ಎಂ. ನಾಗಪ್ಪ (ರಾಯಚೂರು) :— ಸನ್ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ವಿರೋಧ ಪಕ್ಷದಲ್ಲಿರತಕ್ಕಂತಹ ಅನೇಕ ಮಾನ ಸದಸ್ಯರು ಈ ಸಪ್ಲಿಮೆಂಟರಿ ಡಿಮ್ಯಾಂಡನ್ನು ವಿರೋಧಿಸುತ್ತಾ, ಅನೇಕ ವಿಷಯಗಳನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ. ಅದರಂತೆ ನಾನು ಈ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈಗಾಗಲೇ ಒಬ್ಬಿಬ್ಬರು ಸದಸ್ಯರು ಹೇಳಿದಂತೆ ಈಗ ತಂದಿರತಕ್ಕಂತಹ ಡಿಮ್ಯಾಂಡಿನಲ್ಲಿ ಹೆಚ್ಚಿನವುಗಳು ೧೯೭೦ನೇ ಮಾರ್ಚಿ, ಅಥವಾ ಕನ್ಸಾಲಿಡೇಟೆಡ್ ಫಂಡಿನಿಂದ ತೆಗೆದುಕೊಂಡು ಉಪಯೋಗಿಸದಂತಹ ಬೇಡಿಕೆಗಳು. ಇಂತಹ ಬೇಡಿಕೆಗಳನ್ನು ತರತಕ್ಕಂತಹ ವಿಧಾನ ಸರಿಯಲ್ಲ ಎಂಬ ಬಗ್ಗೆ ಅನೇಕ ಸಲ ಈ ಸಭೆಯಲ್ಲಿ ಸರ್ಕಾರಕ್ಕೆ ನಾವು ಎಚ್ಚರಿಕೆಯನ್ನು ಕೂಡ ಕೊಟ್ಟಿದ್ದೇವೆ. ಇಂತಹ ಖರ್ಚುಗಳನ್ನು ಕಡಿಮೆ ಮಾಡಬೇಕೆಂದು ಅನೇಕ ಸಲ ಇವರಿಗೆ ಹೇಳಿದ್ದೇವೆ. ಇವರು ೧೯೭೦-೭೧ರ ಬಜೆಟನ್ನು ಏನು ಪಾಸ್ ಮಾಡಿ ಕೊಂಡಿದ್ದಾರೆ, ಅದರ ಹಣವನ್ನು ಇನ್ನೂ ಯಾವ್ಯಾವಭಾಗಕ್ಕೆ ಎಷ್ಟೆಷ್ಟು ಕೊಡಬೇಕೆಂಬ ಹಂಚಿಕೆ ಕೂಡ ಮಾಡಿಲ್ಲ. ಇನ್ನೂ ಅನೇಕ ಕಡೆ ಯಾವ್ಯಾವ ಕಾರ್ಯಕ್ಕೆ ಹಣ ಬೇಕಾಗುತ್ತದೆ, ಅದನ್ನು ಕೂಡ ಕೊಟ್ಟಿಲ್ಲ. ಈಗಾಗಲೇ ತಮಗೆ ಬೇಕಾದ ಕೆಲವು ಐಟಂಗಳನ್ನು ಮೈನ್ ಬಜೆಟಿನಲ್ಲಿ ತರಲಾರದೆ, ಅವುಗಳನ್ನು ಈಗ ಸಪ್ಲಿಮೆಂಟರಿ ಬಜೆಟಿನಲ್ಲಿ ತಂದು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದೀರೆಂದು ಹೇಳುತ್ತೇನೆ. ಇದರ ಬಗ್ಗೆ ಮತ್ತೊಮ್ಮೆ ನಾನು ಆರ್ಟಿಕಲ್‌ನ್ನು ಓದಿ ತಮ್ಮ ಸಮಯವನ್ನು ಹಾಳು ಮಾಡುವುದಿಲ್ಲ. ಇದರ ಬಗ್ಗೆ ತಾವು ದಯವಿಟ್ಟು ಮತ್ತೊಮ್ಮೆ ಆಲೋಚನೆ ಮಾಡಬೇಕು. ಇದರ ಬಗ್ಗೆ ಮಾನ್ಯ ಸಿದ್ದವೀರಪ್ಪನವರು ಬಹಳ ಹೇಳಿದ್ದಾರೆ.

ಈಗ ಡಿಮ್ಯಾಂಡ್ ನಂ. ೧೭ರ ಬಗ್ಗೆ ಹೇಳುತ್ತೇನೆ. ತಮಗೆ ಗೊತ್ತಿದ್ದಂತೆ, ಡೆಲ್ಲಿಗೆ ಬಾರ್ಡರ್ ಕಮಿಶನ್ ಹೋಗಬೇಕಾಯಿತು ಮತ್ತು ಅನೇಕ ನಮ್ಮ ಕಮಿಟಿಗಳು ನಮ್ಮ ರಾಜ್ಯವನ್ನು ಬಿಟ್ಟು ಬೇರೆ ರಾಜ್ಯಕ್ಕೆ ಹೋಗಬೇಕಾಗಿತ್ತು. ಅಂತಹ ಪರಿಸ್ಥಿತಿಯಲ್ಲಿ ಕೆಲವು ಹಣವನ್ನು ಖರ್ಚು ಮಾಡಿದ್ದಾರೆ. ಅದಕ್ಕೆ ನಾವು ಒಂದು ಕಾಯಿದೆಯನ್ನು ಮಾಡಬೇಕಾಗುತ್ತದೆ. ಅದು ಸರಿ. ಆದರೆ ಈಗ ಎಕ್ಸ್‌ಪೋ ೭೦ಗೆ ಇವರು ಖರ್ಚು ಮಾಡಬೇಕಾದಂತಹ ಪರಿಸ್ಥಿತಿಯಲ್ಲಿ ಇವರಿಗೆ ಯಾವ ಲೀಗಲ್ ಸ್ಯಾಂಕ್ಷನ್ ಇತ್ತು ಎಂಬುದು ನನ್ನ ಮೊದಲನೆಯ ಪ್ರಶ್ನೆ. ನಾನು ಯಾವ ಕಮಿಟಿಗೆ ಇತ್ಯಾದಿಗಳಿಗೆ ಈ ಸಭೆಯ ಸಮ್ಮತಿಯಿಂದ ಖರ್ಚು ಮಾಡಿದ್ದೇವೆ, ಅದಕ್ಕೆ ಸಹ ಅಕೌಂಟೆಂಟ್ ಜನರಲ್ ತಪ್ಪಾಗುತ್ತದೆಂದು ಹೇಳುತ್ತಿದ್ದಾರೆ. ಅದಕ್ಕಾಗಿ ಎರಡು ವರ್ಷಗಳ ಹಿಂದೆ, ವ್ಯಾಲಿಡೇಶನ್ ಆಫ್ ಎಕ್ಸ್‌ಪೆಂಡಿಚರ್ ಆಕ್ಟ್ ಎಂದು ಒಂದು ತಿದ್ದುಪಡಿಯನ್ನು ತಂದು ಪಾಸ್ ಮಾಡಿಕೊಂಡಿದ್ದಾರೆ. ಅಂದ ಮೇಲೆ, ಇವರು ಎಕ್ಸ್‌ಪೋ-೭೦ಗೆ ಇಲ್ಲಿ ೧೦೦ ರೂಪಾಯಿ ಕೇಳಿರುವುದು ಯಾವ ಕಾನೂನು ಪ್ರಕಾರ ? ಇದಕ್ಕೆ ಯಾವ ಸ್ಯಾಂಕ್ಷನ್ ಇತ್ತು ಆಥಾರಿಟಿ ಇತ್ತು ? ಇವತ್ತು ಯಾವುದಾದರೂ ಒಬ್ಬ ಅಧಿಕಾರಿ ಅಥವಾ ಸ್ಪೀಕರ್ ಪರದೇಶಕ್ಕೆ ಹೋದಾಗ, ರೂಲ್ಸ್‌ನ್ನು ಅಮೆಂಡ್ ಮಾಡಬೇಕಾಗುತ್ತದೆ. ಆದರೆ ಈ ಎಕ್ಸ್‌ಪೋ-೭೦ಗೆ ಕಾಯಿದೆ ಕಾನೂನು ಯಾವುದೂ ಇಲ್ಲ. ಇವರು ನಾಲ್ಕನೆಯ ಪುಟದಲ್ಲಿ "ನ್ಯೂ ಹೆಡ್ ಆಫ್ ಅಕೌಂಟ್" ಹುಟ್ಟಿಸುವುದಕ್ಕೆ ಇರತಕ್ಕ ಅಧಿಕಾರ ಏನು ? ಆರ್ಟಿಕಲ್ ೧೫೦ ಪ್ರಕಾರ ಅಕೌಂಟೆಂಟ್ ಜನರಲ್ ಅಥವಾ ಆಡಿಟರ್ ಜನರ್ ಮಾಡಿ ಕೊಟ್ಟಂಥ ಕ್ರಮಬದ್ಧವಾದ ಒಂದು ಫಾರ್ಮಿನಲ್ಲಿ ಇವರು ಲೆಕ್ಕಪತ್ರಗಳನ್ನು ಕೊಡಬೇಕಾಗುತ್ತದೆ. ಇವರು ತಿದ್ದುಪಡಿ ರೂಪದಲ್ಲಿ "ನ್ಯೂ ಹೆಡ್ ಆಫ್ ಅಕೌಂಟ್" ಸೇರಿಸಿ, ಹಿಂದೆ ಇಲ್ಲದಿರತಕ್ಕ ವಿಷಯವನ್ನು ಸೇರಿಸಿರತಕ್ಕದ್ದು ಬಹಳ ಅನ್ಯಾಯವಾದುದು. ಇವತ್ತು ಜಪಾನಿಗೆ ಹೋದಕೆಲಸ ಉತ್ತಮವಾದುದೆಂದು ಎಲ್ಲರೂ ಭಾವಿಸಬಹುದು. ಆದರೆ ಇವರು ಕೊಟ್ಟಿರತಕ್ಕ ಕೈಪಿಡಿಯಲ್ಲಿ ಇವರು ಮಾಡಿರತಕ್ಕ ನೀತಿಯನ್ನು ನೋಡಿದರೆ, ಅದು ತೀರಾ ಅಸಮಂಜಸವಾದುದು. ಪುಟ ೨ರಲ್ಲಿ ಈ ರೀತಿ ಹೇಳಿದ್ದಾರೆ. "Further more, delegates representing voluntary youth organisations catering primarily to the lower and middle classes would also be included in the delegation free of charge".

ಇದನ್ನು ತಾವು ನೇಮಕ ಮಾಡಿರುವುದು-ಯಂಗ್ ಫಾರ್ಮರ್ಸ್ ಅಸೋಸಿಯೇಶನ್ ಮತ್ತು ಇನ್ನೂ ಅನೇಕ ಸಂಘ ಸಂಸ್ಥೆಗಳ ಯುವಕರಿಗೆ ಒಂದು ಅವಕಾಶಕಲ್ಪಿಸುವುದಕ್ಕಾಗಿ. ಆದರೆ ತಾವು ಸೆಲೆಕ್ಟ್ ಮಾಡಿರತಕ್ಕ ನೀತಿಯನ್ನು ಪೇಜ್ ೩೭ರಲ್ಲಿ ನೋಡಬಹುದು. ಅಲ್ಲಿ ಯಂಗ್ ಫಾರ್ಮರ್ ಅಸೋಷಿಯೇಶನ್ ತೆಗೆದುಕೊಳ್ಳೋಣ. ಆದರಲ್ಲಿ ಎಸ್. ಜೆ. ಲಿಂಗರಾಜ್ಸ್ ಭೂಪಾಲ್-ಇವರನ್ನು ಸೆಲೆಕ್ಟ್ ಮಾಡಿದ್ದಾರೆ. ಇವರು ಮಾನ್ಯ ಉಪ-ಸಚಿವೆ ಬಸವರಾಜೇಶ್ವರಿಯವರ ಮಗ ಎಂಬುದು ತಮಗೆ ಗೊತ್ತಿದೆ. ಎರಡನೆಯ ಹೆಸರು ಎಂ ಜಿ. ಮಾಲಿ ಪಾಟಿಲ್. ಇವರು ಸಹ ಉಪ-ಸಚಿವೆಯವರ ಸಂಬಂಧಿಗಳು. ನಾಲ್ಕನೆಯ ಹೆಸರು ಸಿ.ಎಂ. ಲಿಂಗಪ್ಪ ಬಿದಾಡಿ ಹೋಬ್ಳಿ, ಬೆಂಗಳೂರು ಜಿಲ್ಲೆ-ಇವರನ್ನು ತಾವು ಸೆಲೆಕ್ಟ್ ಮಾಡಿದ್ದೀರಿ. ಅದನ್ನು ಕ್ಯಾನ್ಸಲ್ ಮಾಡಿ, ಮಾನ್ಯ ಉಪ-ಮಂತ್ರಿಯವರ ಗಂಡನ ತಮ್ಮನಾದ ಎಂ. ಎ. ಜಾಗೀರದಾರರನು

ಕಳಿಸಿದ್ದೀರಿ. ಇದರ ಔಚಿತ್ಯವೇನು ? ಇಂತಹ ಸಂಸ್ಥೆಗಳಿಂದ ಲೋ ಕ್ಲಾಸ್ ಮತ್ತು ಮಿಡ್ಲ್ ಕ್ಲಾಸ್ ಜನರನ್ನು ಕಳಿಸಬೇಕೆಂದು ಒಂದು ಕಡೆ ಹೇಳುತ್ತಿದ್ದೀರಿ. ಇನ್ನೊಂದು ಕಡೆ ಈ ರೀತಿಯ ಶ್ರೀಮಂತರ ಮಕ್ಕಳನ್ನು ಕಳುಹಿಸುತ್ತಿದ್ದೀರಿ ನನಗೆ ಅಕ್ಟೋಬರ್ ೧೧ನೇ ತಾರೀಕಿನ ಬ್ಲಿಟ್ಸ್ ಪತ್ರಿಕೆಯನ್ನು ನೋಡಿದಾಗ ನಮ್ಮ ಮಾನ್ಯ ಉಪ-ಮಂತ್ರಿಯವರಿಗೆ ೨,೧೦೦ ಎಕರೆ ಜಮೀನು ಇದೆಯೆಂದು ತಿಳಿಯಿತು. ಅಂಥವರನ್ನು ಲೋ ಕ್ಲಾಸ್ ಮಿಡ್ಲ್ ಕ್ಲಾಸ್ ಜನರ ಸ್ಥಾನದಲ್ಲಿ ನೇಮಿಸಿದರೆ, ಅದು ತಾವು ಅನುಸರಿಸುವ ಪದ್ಧತಿಗೆ ತದ್ವಿರುದ್ಧವಾಗುತ್ತದೆ. ತಾವು ಇವತ್ತು ಯಾವ ದೃಷ್ಟಿಯಿಂದ ಈ ಆರು ಲಕ್ಷ ರೂಪಾಯಿಯನ್ನು ಕೇಳುತ್ತಿದ್ದೀರಿ ಅಂದರೆ, ಅದು ಕೇವಲ ನಿಮ್ಮ ಸ್ವಂತ ಹಿತಸಾಧನೆಗಾಗಿ, ಸ್ವಾರ್ಥಕ್ಕಾಗಿ ಮತ್ತು ನಿಮ್ಮ ಸ್ವಜನಪಕ್ಷಪಾತಕ್ಕಾಗಿ ಉಪಯೋಗ ಮಾಡಿಕೊಳ್ಳುವುದಕ್ಕಾಗಿ. ಎರಡನೆಯದಾಗಿ ತಾವು ನಿರೂಪಿಸಿದ ತತ್ವವನ್ನು ತಾವು ಎಷ್ಟು ಮಟ್ಟಿಗೆ ಅನುಸರಿಸಿದ್ದೀರಿ ? ಅದಲ್ಲದೆ, ಬೇರೆ ಸಂಸ್ಥೆಗಳಿಗೆ ರಾಜ್ಯಸರ್ಕಾರದವರು ಡಿಸ್ಕ್ರಿಶನರಿ ಕೋಟಾ ಎಂದು ಏನು ಇಟ್ಟುಕೊಂಡಿದ್ದಾರೆ, ಅವರ ಪದ್ಧತಿಯನ್ನು ತಾವು ನೋಡಬೇಕು. ಅದನ್ನು ಪೇಜ್ ೭, ಪ್ಯಾರಾ ೧೯ರಲ್ಲಿ ಕೊಟ್ಟಿದ್ದಾರೆ. ಅದು ಹೀಗಿದೆ :

> " Government had received a large number of applications for inclusion in the delegation In filling up these vacancies, Government generally followed the principle of 'First come-first served. "

ಈಗ ಅದನ್ನು ಅನೆಕ್ಷರ್ ೧೨ರಲ್ಲಿ ನೋಡಬಹುದು. ಇದರಲ್ಲಿ ಇವರಿಗೆ ಬಂದಂತಹ ಅರ್ಜಿಗಳು ೬೨. ಅದರಲ್ಲಿ ೧೭ ಜನರನ್ನು ಸೆಲೆಕ್ಟ್ ಮಾಡಿದ್ದಾರೆ. ಮೊದಲನೆಯ ಮತ್ತು ಎರಡನೆಯ ಅಪ್ಲಿಕೇಶನ್ ರಿಜೆಕ್ಟ್ ಮಾಡಿದ್ದಾರೆ. ಮೂರನೆಯ ಅಪ್ಲಿಕೇಶನ್ ಸೆಲೆಕ್ಟ್ ಮಾಡಿದ್ದಾರೆ. ಹಾಗೆ ೪, ೫, ೬ ರಿಜೆಕ್ಟೆಡ್. ೭ನೆಯದು ಸೆಲೆಕ್ಟೆಡ್, ಅಂದರೆ ೬೨ ರಲ್ಲಿ ೫೪, ೫೫, ೫೬, ೫೭, ೫೮, ೫೯, ೬೦, ೬೧ ರಲ್ಲಿರುವವರನ್ನು ಪೂರ್ತಿಯಾಗಿ ಸೆಲೆಕ್ಟ್ ಮಾಡಿದ್ದಾರೆ. ತಾವು ಮಾಡಿರತಕ್ಕ ನಿಯಮವೇನೆಂದರೆ "In filling up these vacancies, Government generally followed the principle of "First come-first served". ಎಂದು

ಮೊದಲು ಬಂದವರಿಗೆ ಮೊದಲು ಸ್ಥಾನ ಎಂದು ಹೇಳುವಾಗ ಕೊನೆಯಲ್ಲಿದ್ದ ೮ ಜನರನ್ನು ಸೆಲೆಕ್ಟ್ ಮಾಡುವುದಕ್ಕೆ ಕಾರಣವೇನು ? ಈ ಸೆಲೆಕ್ಟ್ ಮಾಡಿರತಕ್ಕ ಲಿಸ್ಟಿನಲ್ಲಿ ೫ ಹೆಸರುಗಳು ಕಾಂಗ್ರೆಸ್ ಅಧ್ಯಕ್ಷರ ಮನೆಯವರು ಎಂದು ತಿಳಿದು ಬಂದಿದೆ.

5-30 P. M.

ಶ್ರೀ ರಾಮಕೃಷ್ಣ ಹೆಗಡೆ :—ಇದರಲ್ಲಿ ಒಬ್ಬರು ಮಾತ್ರ ಕಾಂಗ್ರೆಸ್ ಅಧ್ಯಕ್ಷರ ಮನೆಯವರು : ಇನ್ನು ೪ ಜನ ಏನಿದ್ದಾರೆ ಅವರು ಕಾಂಗ್ರೆಸ್ ಅಧ್ಯಕ್ಷರಿಗೆ ಸಂಬಂಧವಿಲ್ಲ.

ಶ್ರೀ ಎಂ. ನಾಗಪ್ಪ :—ಗೀತಾ ಹೆಬ್ಬಾರ ಎನ್ನುವವರು ೫೫ನೇ ಸೀರಿಯಲ್ ನಂಬರಿನಲ್ಲಿ ಇದ್ದಾರೆ. ಆದರೂ ಅವರನ್ನೂ ಸೆಲೆಕ್ಟ್ ಮಾಡಿದ್ದಾರೆ. ಹೀಗೆ ಕೊನೆಯಲ್ಲಿದ್ದ ೬ ಹೆಸರುಗಳನ್ನು ಸೆಲೆಕ್ಟ್ ಮಾಡಿದ್ದಾರೆ. ಮತ್ತು ಒಂದೇ ಮನೆಗೆ ಸೇರಿದಂತವರನ್ನು ೪-೫ ಜನಗಳನ್ನು ಸೆಲೆಕ್ಟ್ ಮಾಡಿದ್ದಾರೆ. ಈ ರೀತಿಯಾಗಿ ಎಕ್ಸ್‌ಪೋ-೭೦ ಪ್ರದರ್ಶನದ ಪ್ರವಾಸಕ್ಕೆ ನಿಯೋಗದವರನ್ನು ಸೆಲೆಕ್ಟ್ ಮಾಡುವುದರಲ್ಲಿ ಪಕ್ಷಪಾತ ನಡೆದಿದೆ. ನಾವು ಕೊಡತಕ್ಕ ಹಣ ಮಂತ್ರಿಗಳಿಗಾಗಲೀ, ಅಥವಾ ಮಂತ್ರಿಮಂಡಲದವರ ಮಕ್ಕಳಿಗಾಗಲೀ ಅವರ ಕೈಕೆಳಗೆ ಕೆಲಸ ಮಾಡತಕ್ಕ ಸೆಕ್ರೆಟರಿಯವರ ಮಕ್ಕಳಿಗಾಗಲೀ ಅಲ್ಲ. ಇದರಲ್ಲಿ ಒಂದು ತತ್ವವನ್ನು ನಿರೂಪಣೆ ಮಾಡಿ ಮಧ್ಯಮವರ್ಗದವರ ಮಕ್ಕಳನ್ನು ಎಕ್ಸ್‌ಪೋ-೭೦ರ ಪ್ರದರ್ಶನಕ್ಕೆ ಕಳುಹಿಸುತ್ತೇವೆ ಎಂದು ಹೇಳಿ ಇದರಲ್ಲಿ ಅನ್ಯಾಯ ಮಾಡಿದ್ದಾರೆ. ಸರ್ಕಾರದವರು ಯಾವ ಮುಖವನ್ನು ಇಟ್ಟುಕೊಂಡು ಎಕ್ಸ್‌ಪೋ ಪ್ರದರ್ಶನದ ಬಗ್ಗೆ ೬ ಲಕ್ಷ ರೂಪಾಯಿಗಳಿಗೆ ಈ ಸಭೆಯ ಮಂಜೂರಾತಿಯನ್ನು ಕೇಳುತ್ತಿದ್ದಾರೆಯೋ ನನಗೆ ಗೊತ್ತಿಲ್ಲ, ಇದು ತೀರಾ ನಾಚಿಕೆಗೇಡಿನ ಪ್ರಸಂಗ ಎಂದು ನಾನು ಹೇಳುತ್ತೇನೆ. ೬ ಲಕ್ಷ ರೂಪಾಯಿಗಳದು ಮಹತ್ವದ ಪ್ರಶ್ನೆ ಅಲ್ಲ, ಇದರಲ್ಲಿ ಭ್ರಷ್ಟಾಚಾರ ನಡೆದಿದೆ, ಈ ಸಂಬಂಧದಲ್ಲಿ ನಡೆದಂತಹ ವಿದ್ಯಾರ್ಥಿಗಳ ಚಳುವಳಿಯ ಸಂಬಂಧದಲ್ಲಿ ಪೋಲೀಸ್ ಸಿಬ್ಬಂದಿಗಾಗಿ ಎಷ್ಟೋ ಹಣವನ್ನು ಖರ್ಚು ಮಾಡಿದ್ದಾರೆ. ಯೂನಿವರ್ಸಿಟಿಯ ಸೆನೆಟ್ ಹಾಲ್ ಸುಟ್ಟುಹೋಯಿತು. ಎಷ್ಟೋ ಉಪಕರಣಗಳು ಸುಟ್ಟು ಹೋಯಿತು. ಮತ್ತು ಇದರಿಂದ ವಿದ್ಯಾರ್ಥಿಗಳಿಗೂ ಹಾನಿಯುಂಟಾಗಿದೆ. ಇಂಥಾ ಒಂದು ಸಣ್ಣ ವ್ಯವಸ್ಥೆಯನ್ನು ಮಾಡುವುದರಲ್ಲಿ ಸರ್ಕಾರದವರು ಎಡವಿದ್ದಾರೆ. ಇದಕ್ಕೆ ಸಂಬಂಧಪಟ್ಟ

(ಶ್ರೀ ಎಂ. ನಾಗಪ್ಪ)

ವಿದ್ಯಾರ್ಥಿಗಳ ಚಳುವಳಿಯ ಹಿಂದೆ ಬೇರೆಯವರ ರಾಜಕೀಯ ಕೈವಾಡ ಇದೆಯೆಂದು ಸರ್ಕಾರದವರು ಹೇಳಿದ್ದಾರೆ, ಈ ಒಂದು ಗಲಭೆ ಗಲಾಟೆ ಚಳುವಳಿ ನಡೆಯುವುದಕ್ಕೆ ಸರ್ಕಾರದವರು ಕಾರಣವೇ ಹೊರತು ಬೇರೆ ಯಾರೂ ಕಾರಣರಲ್ಲ ಎಂದು ನಾನು ಹೇಳಬೇಕಾಗಿದೆ. ಈ ಒಂದು ಎಕ್ಸ್‌ಪೋ ಹಗರಣದಲ್ಲಿ ರಾಜ್ಯ ಸರ್ಕಾರ ಎಷ್ಟು ಭಾಗಿಯಾಗಿದೆಯೋ ಅಷ್ಟೇ ಕೇಂದ್ರ ಸರ್ಕಾರವೂ ಕೂಡ ಇದರಲ್ಲಿ ಭಾಗಿಯಾಗಿದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ, ಎಕ್ಸ್‌ಪೋ ಪ್ರದರ್ಶನಕ್ಕೆ ಡಿಲಿಗೇಟ್‌ಗಳನ್ನು ಜಪಾನಿಗೆ ಕಳುಹಿಸುವುದಕ್ಕೆ ಕೇಂದ್ರ ಸರ್ಕಾರದವರು ಪರ್ಮಿಟ್ ಕೊಡದಿದ್ದರೆ ಇಂಥಾ ಒಂದು ಪರಿಸ್ಥಿತಿ ನಡೆಯುತ್ತಿರಲಿಲ್ಲ. ಆದ್ದರಿಂದ ಕೇಂದ್ರ ಸರ್ಕಾರ ನಮ್ಮ ರಾಜ್ಯದಿಂದ ಎಕ್ಸ್‌ಪೋ ಪ್ರದರ್ಶನಕ್ಕೆ ನಿಯೋಗವನ್ನು ಕಳುಹಿಸುವುದಕ್ಕೆ ಪರ್ಮಿಟ್ ಕೊಟ್ಟು ಈ ಪ್ರಕರಣದಲ್ಲಿ ಅವರೂ ಭಾಗಿಯಾಗಿದ್ದಾರೆಂದು ನಾನು ಹೇಳುತ್ತೇನೆ.

ಡಿಮ್ಯಾಂಡ್ ನಂಬರ್ ೫೪ಕ್ಕೆ ಸಂಬಂಧಪಟ್ಟ ಹಾಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಇದರಲ್ಲಿ ಎನ್.ಜಿ ಇ.ಎಫ್., ಕೆ.ಸಿ.ಟಿ. ಮಿಲ್ಸ್, ಎಂ.ಎಸ್ ಕೆ.ಮಿಲ್ಸ್ ಈ ರೀತಿಯಾಗಿ ಅನೇಕ ಮಿಲ್ಲುಗಳಿಗೆ ಸರ್ಕಾರದವರು ದುಡ್ಡನ್ನು ಕೊಡುತ್ತಿದ್ದಾರೆ ಈ ಮಿಲ್ಲುಗಳಿಗೆ ಸಾಲದ ರೂಪವಾಗಿ, ಗ್ರಾಂಟ್ ರೂಪವಾಗಿ, ಇನ್ನೂ ಅನೇಕ ತರಹ ಸೌಲಭ್ಯವನ್ನು ಅವರಿಗೆ ಸರ್ಕಾರದವರು ಕೊಡುತ್ತಿದ್ದಾರೆ, ಸಂತೋಷ. ಏತಕ್ಕೆಂದರೆ ಅದರಿಂದಲೇ ಜೀವನ ಮಾಡತಕ್ಕ ಕೂಲಿಕಾರರಿಗೆ ಕನಿಷ್ಟವೇತನ ಸಿಕ್ಕುತ್ತದೆ ಎಂದು ಈ ಒಂದು ವಿಷಯವನ್ನು ನಾವು ಒಪ್ಪಬೇಕಾಗಿದೆ. ಆದರೆ ಇದರಲ್ಲಿ ಏನಾಗಿದೆ ಎಂದರೆ ಕೂಲಿಕಾರರ ಹೆಸರಿನ ಮೇಲೆ ಮಿಲ್ಲುಗಳಿಗೆ ಗ್ರಾಂಟು ಮತ್ತು ಸಾಲಗಳನ್ನು ಸರ್ಕಾರದವರು ಕೊಡುತ್ತಾರೆ. ಮತ್ತು ಮಿಲ್ಲಿನ ಮಾಲೀಕರಾದ ಬಂಡವಾಳ ಶಾಹಿಗಳಿಂದ ಸರ್ಕಾರಕ್ಕಾಗಲೀ, ತಮ್ಮ ಪಕ್ಷಕ್ಕಾಗಲೀ ಯಾವ ಯಾವ ತರಹ ಸೌಲಭ್ಯ ಮತ್ತು ಸವಲತ್ತುಗಳು ಬೇಕೋ ಅವುಗಳನ್ನು ಒದಗಿಸಿಕೊಳ್ಳುತ್ತಾರೆ. ಗುಲ್ಬರ್ಗ ಮಿಲ್ಲಿನಲ್ಲಿ ಅನೇಕ ಹೊಸ ಮಿಷನರಿಯನ್ನು ಬದಲಾವಣೆ ಮಾಡಿ ಹಳೆಯ ಮಿಷನರಿಯನ್ನು ತಂದು ಹಾಕಿದ್ದಾರೆ ಈ ಸಂದರ್ಭದಲ್ಲಿ ನಾನು ಸರ್ಕಾರದವರಿಗ ಒಂದು ಸೂಕ್ತ ಸಲಹೆಯನ್ನು ಕೊಡುತ್ತೇನೆ. ಅದೇನೆಂದರೆ ದಯಪಿಟ್ಟು ಮಾನ್ಯ ಹಣಕಾಸಿನ ಮಂತ್ರಿಗಳು ೧೯೫೧ನೇ ಇಸವಿಯ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಆಕ್ಟನ್ನು ಓದಬೇಕು ಎಂದು ನಾನು ಹೇಳುತ್ತೇನೆ. ರಾಜಾ ಮಿಲ್ಲು, ಮಿನರ್ವಾಮಿಲ್ಲು, ಎಂ. ಎಸ್. ಕೆ. ಮಿಲ್ಲು, ಹುಬ್ಬಳ್ಳಿ ಕರ್ನಾಟಕ ಮಿಲ್ ಈಗ ಯಾವ ಒಂದು ಪರಿಸ್ಥಿತಿಗೆ ಬಂದಿವೆ ಎಲ್ಲರಿಗೂ ಗೊತ್ತಿದೆ. ಈ ಮಿಲ್ಲುಗಳಿಗೆ ಸರ್ಕಾರದವರು ಕಣ್ಣುಮುಚ್ಚಿಕೊಂಡು ಸರ್ಕಾರದ ಹಣವನ್ನೆಲ್ಲಾ ಸುರಿದು ಸರ್ಕಾರದ ಬೊಕ್ಕಸವನ್ನು ಬರಿದು ಮಾಡುತ್ತಿದ್ದಾರೆ. ಇವರು ಮಾಡತಕ್ಕ ಅನ್ಯಾಯವನ್ನು ಜನ ಕೆಲವೇ ದಿವಸ ಸಹಿಸಿದರೂ ಕೂಡ ಮುಂದೆ ಬರತಕ್ಕ ಜನಾಂಗ ಇವರು ಮಾಡತಕ್ಕ ಅನ್ಯಾಯವನ್ನು ಸಹಿಸುವುದಿಲ್ಲವೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ೧೯೫೧ನೇ ಇಸವಿ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಅಂಡ್ ರೆಗ್ಯೂಲೇಷನ್ ಆಕ್ಟ್ ಪ್ರಕಾರ ಟೆಕ್ಸ್‌ಟೈಲ್ ಇಂಡಸ್ಟ್ರೀಸ್ ಕೂಡ ಅದರಲ್ಲಿ ಬರುತ್ತದೆ. ಆದ್ದರಿಂದ ಈ ಸಿಕ್ ಮಿಲ್‌ಗಳಾದ ರಾಜಾ, ಮಿನರ್ವಾ, ಎಂ.ಎಸ್.ಕೆ. ಮಿಲ್ ಇವುಗಳಿಗೆ ಸರ್ಕಾರದವರು ಜೀವದಾನ ಕೊಟ್ಟು ದುಡ್ಡು ಕೊಟ್ಟು ನಡೆಸುತ್ತಿದ್ದಾರೆ. ಇಂಥಾ ಒಂದು ಪರಿಸ್ಥಿತಿಯನ್ನು ನಿವಾರಣೆ ಮಾಡಬೇಕಾದರೆ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಅಂಡ್ ರೆಗ್ಯೂಲೇಷನ್ ಆಕ್ಟ್ ಪ್ರಕಾರ ಈ ಮಿಲ್‌ಗಳನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸಿಕೊಟ್ಟು ಈ ಸಿಕ್‌ಮಿಲ್‌ಗಳನ್ನೆಲ್ಲಾ ಸೇರಿಸಿ ಒಂದು ಕಾರ್ಪೋರೇಷನ್ ಮಾಡಿ ಅವರು ನಡೆಸುತ್ತಾರೆ. ಇಲ್ಲದೆ ಹೋದರೆ ರಾಜ್ಯ ಸರ್ಕಾರದರು ವೃಥಾ ಇವುಗಳಿಗೆ ಹಣವನ್ನು ಸುರಿಯುತ್ತಿರುವುದು ಬಹಳ ಅನ್ಯಾಯದ ಕೆಲಸ ಎಂದು ನಾನು ಹೇಳುತ್ತೇನೆ. ಈ ಎರಡು ವಿಷಯಗಳ ಬಗ್ಗೆ ಮಾತ್ರ ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ) :—ಮಾನ್ಯ ಅಧ್ಯಕ್ಷರೆ, ಈ ಸಪ್ಲಿಮೆಂಟರಿ ಡಿಮ್ಯಾಂಡ್ ಚರ್ಚೆಯಾಗುತ್ತಿರುವ ಸಂದರ್ಭದಲ್ಲಿ ನಾನು ಡಿಮ್ಯಾಂಡ್ ನಂಬರ್ ೨೧ರ ಬಗ್ಗೆ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ೨೧ ಡಿಮ್ಯಾಂಡ್‌ನಲ್ಲಿ ಹೆಲ್ತ್ ಅಂಡ್ ವಾಟರ್ ಸಪ್ಲೆ ಮತ್ತು ನ್ಯಾಷನಲ್ ರೂರಲ್ ವಾಟರ್ ಸಪ್ಲೆ ಬಗ್ಗೆ ಹಣ ಕೇಳಿದ್ದಾರೆ. ನ್ಯಾಷನಲ್ ರೂರಲ್ ವಾಟರ್ ಸಪ್ಲೆ ಬಗ್ಗೆ ಹೇಳುವುದಾದರೆ ಈ ಸ್ಕೀಮ್ ಪ್ರಕಾರ ಸರ್ಕಾರದವರು ತಮಗೆ ಬೇಕಾದ ಕಡೆ ಮಾತ್ರ ಇದನ್ನು ಜಾರಿಗೆ ಕೊಡುತ್ತಿದ್ದಾರೆ. ಬೇರೆ ಕಡೆ ಕೇಳಿಕೊಂಡರೂ ಕೂಡ ಜಾರಿಗೆ ಕೊಡುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ಮಹದೇಶ್ವರ ಬೆಟ್ಟದಲ್ಲಿ ಈ ಸ್ಕೀಮ್‌ನ್ನು ಜಾರಿಗೆ ತರುವ ಬಗ್ಗೆ ಆ ಸ್ಥಳದವರು ಅವರ ಭಾಗದ ಹಣವಾದ ಒಂದು ಲಕ್ಷ ರೂಪಾಯಿಗಳನ್ನು ಕಟ್ಟಿ ಎಷ್ಟೋ ದಿವಸಗಳಾಗಿವೆ. ಆದರೆ ಮಂಜೂರಾತಿ ಕೊಟ್ಟಿಲ್ಲ. ಮಹದೇಶ್ವರ ಬೆಟ್ಟಕ್ಕೆ ಲಕ್ಷಾಂತರ ಜನರು ಬಂದು ದೇವರ ಪೂಜೆ ಮಾಡಿಸಿಕೊಂಡು ಹೋಗುತ್ತಿದ್ದಾರೆ. ಇಂತಹ ಜಾಗದಲ್ಲಿ ನೀರಿನ ಅನುಕೂಲವನ್ನು ಮಾಡಿಕೊಟ್ಟಿಲ್ಲ. ತಮಗೆ ಇಷ್ಟಬಂದ ಕಡೆ ಮಾತ್ರ

ಈ ಸ್ಕೀಮ್‌ನ್ನು ಜಾರಿಗೆ ತರುವುದು ಸರಿಯೇ ಎಂದು ಕೇಳುತ್ತೇನೆ. ಗುಂಡ್ಲುಪೇಟೆಯಲ್ಲಿ ಮತ್ತು ಅದರ ಸುತ್ತಮುತ್ತ ಇರತಕ್ಕ ೧೨೮ ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರಿನ ತೊಂದರೆ ಬಂದು ನೀರಿಗಾಗಿ ರಾತ್ರಿಯೆಲ್ಲಾ ಬಿಂದಿಗೆ ಹಿಡಿದುಕೊಂಡು ಓಡಾಡುತ್ತಿದ್ದಾರೆ. ಇಂತಹ ಪ್ರದೇಶದಲ್ಲಿ ೫-೬ ಗ್ರಾಮಗಳಲ್ಲಿಯಾದರೂ ಕೂಡ ಈ ಸ್ಕೀಮ್‌ನ್ನು ಜಾರಿಗೆ ತಂದಿದ್ದೀರಾ ಎಂದು ಕೇಳುತ್ತೇನೆ. ಬಡಜನರನ್ನು ಗೋಳಾಡಿಸುತ್ತಿದ್ದೀರಿ, ಸ್ವಾತಂತ್ರ್ಯ ಬಂದು ೨೩ ವರ್ಷಗಳಾದರೂ ಕೂಡ ಪ್ರತಿಯೊಂದು ಹಳ್ಳಿಗೂ ಕೂಡ ಕುಡಿಯುವ ನೀರಿನ ಬಾವಿಯನ್ನು ಒದಗಿಸದೇ ಇರುವುದು ಧರ್ಮವೇ ಎಂದು ಕೇಳುತ್ತೇನೆ. ಇನ್ನು ಆರೋಗ್ಯ ಇಲಾಖೆಯ ಬಗ್ಗೆ ಬರುತ್ತೇನೆ. ಪ್ರೈಮರಿ ಹೆಲ್ತ್ ಯೂನಿಟ್ ಬಗ್ಗೆ ಮಾತನಾಡಬೇಕಾದರೆ ಕಬ್ಬಳ್ಳಿಯಲ್ಲಿ ಒಂದು ಕಬ್ಬೈಂಡ್ ಆಸ್ಪತ್ರೆಯಿದೆ. ಅಲ್ಲಿ ಇಬ್ಬರೂ ಡಾಕ್ಟರ್ ಇರುವುದಕ್ಕೆ ಅವಕಾಶವಿದೆ. ಆದರೆ ಅಲ್ಲಿ ಇವತ್ತಿನ ದಿವಸ ಲೇಡಿ ಡಾಕ್ಟರ್ ಆಗಲೀ ಮೇಲ್ ಡಾಕ್ಟರ್ ಆಗಲಿ ಇಲ್ಲ. ಮೊದಲಿದ್ದ ಡಾಕ್ಟರ್‌ಗಳನ್ನು ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡಿದಮೇಲೆ ಪುನಃ ಆ ಜಾಗಕ್ಕೆ ಹೊಸಬರನ್ನು ನೇಮಕ ಮಾಡಿಲ್ಲ ಅಲ್ಲಿ ಡಾಕ್ಟರ್‌ಗಳು ವಾಸ ಮಾಡುವುದಕ್ಕೆ ಒಳ್ಳೆಯ ಮನೆಗಳು ಇವೆ. ಇಂತಹ ಕಡೆ ಗಂಡಹೆಂಡತಿ ಇಬ್ಬರೂ ಡಾಕ್ಟರ್ ಆಗಿರುವಂತವವರನ್ನು ನೇಮಕ ಮಾಡಿದರೆ ಒಳ್ಳೆಯದು ಎಂದು ಮಾನ್ಯ ಆರೋಗ್ಯ ಮಂತ್ರಿಗಳಲ್ಲಿ ನಾನು ಅರಿಕೆ ಮಾಡಿಕೊಂಡೆ ಅವರು ಸಹ ಒಪ್ಪಿದ್ದರು. ಆದರೆ ಈ ವಿಚಾರದಲ್ಲಿ ಮಾನ್ಯ ಡಿ.ಎಂ. ಸಿದ್ದಯ್ಯನವರು ಮಂತ್ರಿಗಳ ಹತ್ತಿರ ಏನೇನೋ ಸುಳ್ಳು ಸುಳ್ಳು ವಿಚಾರಗಳನ್ನು ಹೇಳಿಬಿಟ್ಟಿದ್ದಾರೆ ಮಾನ್ಯ ಆರೋಗ್ಯ ಮಂತ್ರಿಗಳನ್ನು ಈಗಲೇ ಸಭೆಗೆ ಕರೆಸಿದರೆ ಅವರ ಎದುರಿಗೆ ಬಾಕಿ ವಿಷಯಗಳನ್ನು ಹೇಳುತ್ತೇನೆ. ಈಗ ಮತ್ತೊಂದು ತಮಾಷೆಯ ವಿಚಾರ ಹೇಳುತ್ತೇನೆ. ಅದು ಏನು ಹೊಸ ವಿಚಾರವಲ್ಲ. ಡಾಕ್ಟರ್ ಮುನಿರಾ ಬೇಗಂ ಗೆ ಸಂಬಂಧಪಟ್ಟ ವಿಚಾರ. ಇದು ನೆನ್ನೆದಿವಸ ಮೇಲ್ಮನೆಯಲ್ಲಿ ಕೂಡ ಡಿಸ್‌ಕಸ್ ಆಗಿದೆ. ಈ ಬಗ್ಗೆ ಸಾಕಾದಷ್ಟು ಮೆಟೀರಿಯಲ್ಸ್ ಕಲೆಕ್ಟ್ ಮಾಡಿದ್ದೇನೆ.

ಅಧ್ಯಕ್ಷರು:—ಮೇಲ್ಮನೆಯಲ್ಲಿ ಚರ್ಚೆಯಾದಂಥ ವಿಚಾರವನ್ನು ಇಲ್ಲ ಪ್ರಸ್ತಾಪ ಮಾಡಬೇಡಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ:—ಈ ದಿನದ ಪತ್ರಿಕೆಯಲ್ಲಿ ಆ ವಿಚಾರ ಬಂದಿರುವುದರಿಂದ ಹೇಳುತ್ತಿದ್ದೇನೆ. ಹೆಣ್ಣುಮಕ್ಕಳಿಗೆ ಎಷ್ಟೊಂದು ಅನ್ಯಾಯವಾಗುತ್ತಿದೆ ಎಂಬುದನ್ನು ತೋರಿಸಲು ನಾನು ಡಾಕ್ಟರ್ ಮುನಿರಾಬೇಗಂ ವಿಚಾರ ಹೇಳಬೇಕಾಗಿದೆ. ಈ ಡಾಕ್ಟರ್ ಎರಡು ವರ್ಷ ನಾಲ್ಕು ತಿಂಗಳವರೆಗೆ ವಾಣೀವಿಲಾಸ ಆಸ್ಪತ್ರೆಯಲ್ಲಿ ಕೆಲಸ ಮಾಡಿದ ಮೇಲೆ ತಿಪ್ಪಸಂದ್ರಕ್ಕೆ ವರ್ಗ ಮಾಡಿದರು. ಡಾಕ್ಟರ್ ವರ್ಗಾವಣೆಯಲ್ಲಿ ಬಹಳಷ್ಟು ಅಜೆಸ್ಟ್‌ಮೆಂಟ್‌ಗಳು ನಡೆಯುತ್ತಿರುತ್ತದೆ. ಇಷ್ಟ ಬಂದಾಗ ವರ್ಗ ಮಾಡುವುದು, ಬೇಕಾದಾಗ ಮತ್ತೆ ಬೆಂಗಳೂರಿಗೆ ಕರೆಸಿಕೊಳ್ಳುವುದು ನಡೆಯುತ್ತಿದೆ. ಡಾಕ್ಟರ್ ಮುನಿರಾಬೇಗಂ ಅವರನ್ನು ಪ್ರೈಮರಿ ಹೆಲ್ತ್ ಯೂನಿಟ್‌ನಲ್ಲಿ ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಟ್ರೈನಿಂಗ್ ಕೊಡಲು ತಿಪ್ಪಸಂದ್ರದಿಂದ ಮತ್ತೆ ಬೆಂಗಳೂರಿಗೆ ಕರೆಸಿಕೊಂಡಿದ್ದರು. ಟ್ರೈನಿಂಗ್ ಕೊಡತಕ್ಕಂಥ ಅವಧಿ ೧೫ ದಿವಸಗಳು. ಅದರಂತೆ ಡಾಕ್ಟರ್ ಮುನಿರಾಬೇಗಂ ೧೫ ದಿವಸದ ಟ್ರೈನಿಂಗ್ ಮುಗಿಸಿ ಮತ್ತೆ ತಿಪ ಸಂದ್ರಕ್ಕೆ ಹೋದರು. ಅವರು ಟ್ರೈನಿಂಗ್‌ನಲ್ಲಿದ್ದ ಸಮಯದಲ್ಲಿ ಅಂದರೆ ಕೊನೆಯದಿವಸ ಟ್ಯೂಬೆಕ್ಟಮಿ ಚಿಕಿತ್ಸೆಗಾಗಿ ರಾತ್ರಿ ಒಂದು ಗಂಟೆಯಲ್ಲಿ ಒಂದು ಕೇಸ್ ಬಂತು. ಬಂದಾಗ ಆ ಹೆಂಗಸಿಗೆ ಯಾವ ರೋಗವು ಸಹ ಇರಲಿಲ್ಲ. ಆಪರೇಷನ್ ಮಾಡುವುದಕ್ಕೆ ಮೊದಲು ಬ್ಲಡ್ ಪ್ರೆಸರ್ ಮತ್ತು ಯೂರಿನ್ ಟೆಸ್ಟ್ ಮಾಡಿದರು. ಬ್ಲಡ್ ಪ್ರಜರ್ ೧೪೦ : ೯೦ ಇತ್ತು. ಜೋರಾಗಿ ಮಾತನಾಡುವಾಗ ಬ್ಲಡ್ ಪ್ರಜರ್ ೧೬೦ : ೧೧೦ ರವರೆಗೂ ಸಹ ಹೋಗಿರುತ್ತದೆ. ಇದು ಎಲ್.ಎಸ್ ಓದಿದ ಹುಡುಗರಿಗೂ ಸಹ ಗೊತ್ತಿರುತ್ತದೆ. ಯೂರಿನ್ ಟೆಸ್ಟ್ ಮಾಡಿದಾಗ ಅದರಲ್ಲಿ ಸ್ವಲ್ಪ Albumin ಇತ್ತು. ಈಕೆ ಮಗುವನ್ನು ಹೆತ್ತ ಮೇಲೆ ನಾಲ್ಕು ದಿವಸದವರೆಗೂ ಕೂಡ ಮಗು ಮತ್ತು ಈಕೆ ಆರೋಗ್ಯವಾಗಿಯೇ ಇದ್ದರು, ಆದ್ದರಿಂದ ಆಕೆಯ ಗಂಡನ ಅನುಮತಿ ತೆಗೆದುಕೊಂಡು ಟ್ಯೂಬೆಕ್ಟಮಿ ಆಪರೇಷನನು ಟ್ರೈನಿ ಆಗಿದ್ದಂಥ ಶ್ರೀಮತಿ ಮುನಿರಾಬೇಗಂ ಅವರು ಮಾಡಿದರು. ಆಪರೇಷನ್ ಮಾಡುವಾಗ ಮತ್ತು ಕೊನೆಯಲ್ಲಿ ಮುಚ್ಚುವಾಗ ಸೀನಿಯರ್ ಡಾಕ್ಟರ್‌ಗಳನ್ನು ಕರೆದು ತೋರಿಸಿದ್ದಾರೆ. ಸೀನಿಯರ್ ಸರ್ಜನ್ಸ್ ಕೂಡ ಎಲ್ಲವೂ ಸರಿಯಾಗಿದೆ ಎಂದು ಹೇಳಿದ್ದರು. ಆಪರೇಷನ್ ಆದ ನಾಲ್ಕು ದಿವಸದವರೆಗೆ ಆರೋಗ್ಯವಾಗಿಯೇ ಇದ್ದರು. ನಾಲ್ಕನೆ ದಿವಸದ ರಾತ್ರಿ ಆಕೆಗೆ ಫಿಟ್ಸ್ ಬಂತು. ಔಷಧ ಕೊಟ್ಟರು. ಮತ್ತೆ ಮಾರನೆ ದಿವಸ ಬೆಳಿಗ್ಗೆ ೭ ಗಂಟೆಗೆ ಫಿಟ್ಸ್ ಬಂತು. ಆಗ ವಿಕ್ಟೋರಿಯಾ ಆಸ್ಪತ್ರೆಯಿಂದ Neuro Physician ಅನ್ನು ಕರೆಸಿದರು. ಅವರು ಬಂದು ನೋಡಿ ಒಂದು ಔಷಧವನ್ನು ಬರೆದು ಕೊಟ್ಟರು. ಅದು ಸ್ಟಾಕ್‌ನಲ್ಲಿ ಇರಲಿಲ್ಲವಾದ್ದರಿಂದ ಹೊರಗಡೆ ಕೊಂಡು ತರಬೇಕೆಂದು ಆಕೆಯ ಗಂಡನಿಗೆ ಹೇಳಿದರು. ಇಂತಹ ಕೇಸ್‌ಗಳಲ್ಲಿ ಕೇಂದ್ರ ಸರ್ಕಾರದವರು ಫ್ರೀಯಾಗಿ ಔಷಧವನ್ನು ಸಪ್ಲೈ ಮಾಡುವುದರಿಂದ ಹೊರಗಡೆಯಿಂದ ತರಿಸಿದ್ದು ತಪ್ಪು ಎಂಬುದಾಗಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಒಂದು ಪಕ್ಷ ಹೊರಗಡೆಯಿಂದ ತರಿಸಿಕೊಡದೆ ಆಕೆ ಸತ್ತುಹೋಗಿದ್ದರೆ ಅದೂ ಕೂಡ ತಪ್ಪು ಎಂದು ಹೇಳುತ್ತಿದ್ದರು. ಔಷಧ ಸಪ್ಲೈ ಇಲ್ಲದಾಗ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಡ್ಯೂಟಿಯಲ್ಲಿದ್ದ ಡಾಕ್ಟರ್ ಯಾವಾಗಲೂ ಹೊರಗಡೆಯಿಂದ ತರುವಂತೆ ಬರೆದುಕೊಡುತ್ತಾರೆ. ನಂತರ ಈ ದುಡ್ಡನ್ನು ರೀಇಂಬರ್ಸ್ ಮಾಡುವುದಕ್ಕೆ ಅವಕಾಶವಿದೆ. ಇದು ಎಂ.ಎಲ್.ಎ.ಗಳಿಗೂ ಕೂಡ ಅನ್ವಯ ವಾಗುತ್ತದೆ. ಅದು ಕೂಡ ೪ ರೂಪಾಯಿ ಚಿಲ್ಲರೆಯ ಔಷಧ. ಹೊರಗಡೆಯಿಂದ ತರಿಸಿದ್ದೇ ತಪ್ಪು ಎಂದು ಇಷ್ಟೊಂದು ಗಲಾಟೆ ಮಾಡಬೇಕೇ? ಹೊರಗಡೆಯಿಂದ ತರಿಸಿಕೊಡದಿದ್ದರೆ ಏತಕ್ಕೆ ತರಿಸಿಕೊಡಲಿಲ್ಲ ವೆಂದು ನಂತರ ನೀವೇ ಆಕ್ಷೇಪಣೆ ಮಾಡುತ್ತಿದ್ದೀರಿ. Neuro Physician ಬರೆದುಕೊಟ್ಟಾಗ ಡ್ಯೂಟಿಯಲ್ಲಿದ್ದ ಡಾಕ್ಟರ್ ಆ ಔಷಧ ಸ್ಟಾಕ್‌ನಲ್ಲಿ ಇಲ್ಲದಿದ್ದರೆ ಹೊರಗಡೆಯಿಂದ ತರಿಸದೆ ಮತ್ತೆ ಏನು ಮಾಡಬೇಕಾಗಿತ್ತು. ಇದರಲ್ಲಿ ಯಾವ ತರಹದ ತಪ್ಪೂ ಕೂಡ ಹೌಸ್ ಸರ್ಜನದ್ದು ಇಲ್ಲ. ಹೊರಗಡೆ ಯಿಂದ ಔಷಧ ತರಿಸಿಕೊಟ್ಟ ಮೇಲೂ ಕೂಡ ಆಕೆ ಸತ್ತುಹೋದಳು. ಆಪರೇಷನ್ ಆದ ೪ ದಿವಸದ ನಂತರ ಸತ್ತರೂ ಕೂಡ ಆಪರೇಷನ್ ಮಾಡಿ ತಿಪ್ಪಸಂದ್ರಕ್ಕೆ ಹೋಗಿದ್ದ ಡಾಕ್ಟರ್ ಮುಂನರಾಬೇಗಂ ಮೇಲೆ ತಪ್ಪು ಹಾಕಿ ಆಕೆಯನ್ನು ಸಸ್ಪೆಂಡ್ ಮಾಡಿದ್ದಾರೆ. ಈಕೆಗೆ ಹೇಳುವವರು ಕೇಳುವವರು ಯಾರು ಇಲ್ಲವೆಂದು ಕೊಂಡು ಸಸ್ಪೆಂಡ್ ಮಾಡಿದ್ದೀರಾ? ಇದು ಪ್ರೈಮಾಫೇಸಿ ಕೇಸ್ ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಟ್ರೈನಿಂಗ್ ಆಗಿದ್ದಂತ ಡಾಕ್ಟರ್ ಆಪರೇಷನ್ ಮಾಡುವಾಗ ಇತರೇ ದೊಡ್ಡ ೧೧ ಜನ ಡಾಕ್ಟರ್‌ಗಳು ಅದನ್ನು ನೋಡಿಸರಿಯಾಗಿದೆ ಎಂದು ಹೇಳಿದ್ದರೂ ಕೂಡ ಆಕೆ ಸತ್ತಿದ್ದಕ್ಕೆ ಡಾಕ್ಟರ್ ಮುನಿರಾಬೇಗಂ ಕಾರಣ ಎಂದು ಹೇಗೆ ಹೇಳುತ್ತೀರಿ?

ಆಮೇಲೆ ಈ ಪೇಷಂಟು ಟ್ಯಾಕ್ಸಿಮಿಯಾ ರೋಗದಿಂದ ಬಳಲುತ್ತಿದ್ದಾರೆ ಎಂದು ಗೊತ್ತಾಯಿತು ಎಂದು ಹೇಳಿದರು. ಇದಕ್ಕೋಸ್ಕರ ಆಪರೇಷನ್ ಮಾಡಬೇಕು ಎಂದು ಇಲ್ಲಿರುವ ದೊಡ್ಡ ಡಾಕ್ಟರು ಹಾಗೂ ಯುನಿಟ್ ಡಾಕ್ಟರುಗಳು ಇವರೆಲ್ಲಾ ಸರ್ಟಿಫೈ ಮಾಡಿದಮೇಲೆ ಇಲ್ಲಿದ್ದ ಡಾಕ್ಟರ್ ಮುನಿರಾಬೇಗಂ ಎನ್ನುವವರು ಆಪರೇಷನ್ ಮಾಡುದರು ಮತ್ತು ಅವರು ಮಾಡಿರುವುದು ಸರಿಯಾಗಿದೆಯೋ ಇಲ್ಲವೇ ಎನ್ನು ವುದನ್ನು ಇಲ್ಲಿದ್ದ ದೊಡ್ಡ ಡಾಕ್ಟರುಗಳಿಗೆ ತೋರಿಸಿದರು. ಅವರೂ ಸರಿಯಾಗಿದೆ ಎಂದು ಒಪ್ಪಿದರು ಮುನಿರಾ ಬೇಗಂ ಎನ್ನುವ ಡಾಕ್ಟರು ಇಲ್ಲಿ ಬರೀ ಟ್ರೇನೀ ಡಾಕ್ಟರು ಆಗಿದ್ದರು. ಇದರಿಂದ ಇಲ್ಲಿ ಆಪರೇಷನ್ ನಡೆದ ಮೂರನೇ ದಿವಸ ಇವರ ಯೂನಿಟ್ ಡಾಕ್ಟರು ಇವರನ್ನು ಕರೆಸಿ ಇವರಿಗೆ ನಿಗದಿಯಾಗಿದ್ದ ಹದಿನೈದು ದಿನಗಳ ಟ್ರೇನಿಂಗು ಮುಗಿದಿದೆ. ಆದುದರಿಂದ ಅವರು ಹಿಂದೆ ಇದ್ದ ವಿಲೇಜ ಹೆಲ್ತ್ ಯೂನಿಟ್ಟಿಗೆ ಹೋಗಬಹುದು ಎಂದು ಅಪ್ಪಣೆ ಕೊಟ್ಟರು. ಇದರಂತೆ ಈ ಮುನಿರಾಬೇಗಂ ಡಾಕ್ಟರು ಟ್ರೇನಿ ವಾಪಸು ತಮ್ಮದ ಜಾಗಕ್ಕೆ ಹೋದರು. ಆದರೆ ಇಲ್ಲಿ ಆಪರೇಷನ್ ಮಾಡಿದ ಪೇಷಂಟಿಗೆ ನಾಲ್ಕು ದಿನಗಳಾದ ನಂತರ ರಿಗ್ಸ್ ಎನ್ನುವ ಒಂದು ಕಾಯಿಲೆ ಬಂತು ಎಂದರು. ಇದನ್ನು ಪರೀಕ್ಷೆ ಮಾಡಲು ವಿಕ್ಟೋರಿಯಾ ಆಸ್ಪತ್ರೆಯ ನ್ಯೂರೋ ಫಿಸಿಷಿಯನ್ ಕರಿಸಿದರು. ಇವರು ಬಂದು ಇವರನ್ನು ಟೆಸ್ಟ್ ಮಾಡಿ ಇದಕ್ಕೆ ಬೇಕಾಗುವ ಔಷದಿಯನ್ನು ಪ್ರಿಸ್‌ಕ್ರೈಬ್ ಮಾಡಿ ಕೊಟ್ಟರು. ಇಲ್ಲಿದ್ದ ಹೌಸ್ ಸರ್ಜನ್ ರವರು ತಮ್ಮ ಬಳಿ ಇರುವ ಸ್ಟಾಕ್‌ನಲ್ಲಿ ಇಲ್ಲಿ ಬೇಕಾಗಿದ್ದ ಔಷದಿ ಇರದೇ ಇದ್ದುದರಿಂದ ಇದೇ ಔಷದಿ ಯನ್ನು ಬೇರೆಯವರ ಕಡೆಯಿಂದ ಖರೀದಿ ಮಾಡಿಸಿ ತರಿಸಿ ಕೊಟ್ಟರು. ಈಗ ಇಲ್ಲಿದ್ದ ಡಾಕ್ಟರ ಮೇಲೆ ಏನು ಚಾರ್ಜು ಬೇಸ್ ಮಾಡಿದ್ದಾರೆಂದರೆ ಫ್ಯಾಮಿಲಿ ಪ್ಲಾನಿಂಗು ಇಲಾಖೆಯಲ್ಲಿ ಇರುವ ಡಾಕ್ಟರುಗಳು ಇಲ್ಲಿ ಬರುವ ಜನರಿಗೆ ಎಲ್ಲ ಔಷಧಿಗಳನ್ನೂ ಪುಕ್ಕಟೆಯಾಗಿಯೇ ಕೊಡಬೇಕು ಎನ್ನುವ ನಿಯಮ ಇದೆ. ಆದರೆ ಇಲ್ಲಿನ ಸಂದರ್ಭದಲ್ಲಿ ಇವರಿಗೆ ಬೇಕಾದ ಔಷಧಿ ಇಲ್ಲದುದರಿಂದ ಇದನ್ನು ಬೇರೆ ಕಡೆಯಿಂದ ಖರೀದಿ ಮಾಡಿ ಅದನ್ನು ಉಪಯೋಗಿಸಬೇಕಾಗಿ ಬಂತು. ಇದರ ಬಗ್ಗೆ ನಾನು ಸರಕಾರದಲ್ಲಿ ಒಂದು ಪ್ರಶ್ನೆ ಕೇಳುತ್ತೇನೆ. ನಮ್ಮ ಎಂ ಎಲ್ ಎ ಗಳಾಗಿರುವವರೂ ಕೂಡ ಔಷಧಿ ಇಲ್ಲ ಎಂದು ಆಸ್ಪತ್ರೆಗಳಲ್ಲಿ ಗೊತ್ತಾದಾಗ ಅದನ್ನು ಬೇರೆ ಕಡೆಯಿಂದ ಕೊಂಡು ಕೊಂಡು ಬಂದು ಅದನ್ನು ಆಮೇಲೆ ರೀ ಇಂಬರ್ಸ್ ಮಾಡಿಕೊಳ್ಳುತ್ತಾರೆ ಇದರಲ್ಲೇನೂ ತಪ್ಪಾಗುತ್ತದೆ. ಇದಕ್ಕೆ ಯಾರು ಕಾರಣರು ? ನಾನು ಹೇಳಿ ದುದಕ್ಕೆ ಇಲ್ಲಿ ಹೆಲ್ತ್ ಮಿನಿಸ್ಟರ್‌ರವರು, ಇದು ಸಸ್‌ಪೆನ್‌ಷನ್ ಪನಿಷ್‌ಮೆಂಟ್ ಅಲ್ಲ ಇದನ್ನು ಎನ್‌ಕ್ವೈರಿ ಮಾಡಿದ ಮೇಲೆ ತಪ್ಪು ಸಾಬೀತಾಗದೇ ಹೋದರೆ ಅವರನ್ನು ರೀಇನ್‌ಸ್ಟೇಟು ಮಾಡಬಹುದು ಎಂದು ಹೇಳಿದರು. ಈ ಕೇಸನ್ನು ಎನ್‌ಕ್ವೈರಿ ಮಾಡುವವರು ಯಾರು ? ಇದರ ಬಗ್ಗೆ ಎಲ್ಲ ಕಾಗದಪತ್ರಗಳನ್ನೂ ವೈಸ್ ಡೀನ್‌ರವರು ಆಗಲೇ ಕಳುಹಿಸಿದ್ದಾರೆ. ಇದನ್ನು ಈಗ ಎನ್‌ಕ್ವೈರಿ ಡಾಕ್ಟರು ದೇಸಾಯಿಯವರು. ಮುನಿರಾಬೇಗಂ ಎನ್ನುವವರನ್ನು ಎನ್‌ಕ್ವೈರಿ ಮಾಡುತ್ತೇವೆ ಎಂದು ಹೇಳುವುದೆಲ್ಲಾ ಇದೂ ಬರಿ ನಾಟಕ. ಇಲ್ಲಿ ಯೂನಿಟ್ ಕೆಳ ಹೆಡ್ ಆಗಿರುವವರು ಎಲ್ಲ ರಿಕಾರ್ಡುಗಳನ್ನು ಕಳುಹಿಸಬೇಕೆಂದು ಸೂಚನೆಗಳನ್ನು ಕೊಟ್ಟಿದ್ದಾರೆ. ಯೂನಿಟ್ ಹೆಡ್ ಆಗಿರುವವರೇ ಎಲ್ಲ ವಿಚಾರಗಳನ್ನು ತನಿಖೆ ಮಾಡಬೇಕು ಇವರಲ್ಲಿ ಪೇಷಂಟನ್ನು ಆಪರೇಷನ್ ಮಾಡಿದ ಮೇಲೆ ಇವರ ಮೇಲಿನ ಅಧಿಕಾರಿಗಳು ವೈಸ್ ಡೀನ್ ಹಾಗೂ ಇನ್ನಿತರ ಡಾಕ್ಟರುಗಳು ಸರಿಯೆಂದು ಹೇಳಿರುವಾಗ ಇದರಲ್ಲಿ ಎನ್‌ಕ್ವೈರಿ ಮಾಡುವುದಕ್ಕಾದರೂ ಏನಿದೆ ?

ಇದರ ಬಗ್ಗೆ ತನಿಖೆ ಮಾಡುತ್ತೇವೆ ಎಂದು ಮಂತ್ರಿಗಳು ಇಲ್ಲೇಕೆ ಹೇಳಬೇಕಾಗಿತ್ತು ? ಡಾಕ್ಟರು ದೇಸಾಯಿ ಇವರಿಂದ ಎನ್‌ಕ್ವೈರಿ ಮಾಡಿಸುತ್ತೇವೆಂದು ಹೇಳಿದರು. ಇದನ್ನು ಎನ್‌ಕ್ವೈರಿ ಮಾಡುವವರು ಯಾರು ? ಡಾಕ್ಟರು ದೇಸಾಯಿ ಎನ್ನುವವರು, ಇವರ ಇಂಟೆಗ್ರಿಟಿ ಏನು ಇವರನ್ನು ೧೯೬೭ನೇ ಇಸವಿಯಲ್ಲಿ ಬೌರಿಂಗು ಹಾಗು ಲೇಡಿ ಕರ್ಜನ್ ಆಸ್ಪತ್ರೆಗೆ ವರ್ಗ ಮಾಡಿದಾಗ ಇವರ. ಬಗ್ಗೆ ಅಲ್ಲಿ ವಿಚಾರ ಮಾಡಿದಾಗ ಅಲ್ಲಿ ಏನು ಬರೆದಿದ್ದಾರೆಂದರೆ:

That the present incumbent in the post of Director does not have the requjste qualifica tions ; you should not have appointed him.

MR. SPEAKER :—The Hon. Member may please conclude her speech within two minutes.

Sri K. S. NAGARATHNAMMA :—I cannot do that. I am speaking on a matter of life and death and where injustice has been done. Please give me a few minutes. I will not take a minute more than what is necessary.

ತಾವು ಹೀಗೆ ನನ್ನನ್ನು ಮಧ್ಯದಲ್ಲಿ ಕುಳಿತುಕೊಳ್ಳಬೇಕೆಂದು ಹೇಳಿದರೆ ಹೇಗೆ ಇದರ ಬಗ್ಗೆ ಹೇಳಲು ಇನ್ನೂ ಬೇಕಾದಷ್ಟು ವಿಚಾರಗಳಿವೆ.

MR. SPEAKER :—Hon. Member cannot have time at her choice.

SRIMATI K, S. NAGARATHNAMMA :—You are interferring with me. I am already a patient. You allow me to complete my speech. This is an important matter.

MR. SPEHKER .—Most of the speech is irrelevant. It does not pertain to the subject on hand. I request the Hon. Member to conclude her speech early. Does the Hon. Member know the meaning of the word EARLY.

Srimathi K. S. NAGARATHNAMMA .—I am sufficiently educated. You must know that.

MR. SPEAKER .—Is that the sort of reply that a Member should give to Chair ? I have called the Hon. Members to speak because the whip of her party sent her name.

ಶ್ರೀಮತಿ ಕೆ ಎಸ್ ನಾಗರತ್ನಮ್ಮ: ನಾನು ಇಲ್ಲಿ ಡಾಕ್ಟರು ದೇಸಾಯಿಯವರ ಕ್ರೆಡೆನ್‌ಷಿಯಲ್ಸ್ ಬಗ್ಗೆ ಹೇಳುತ್ತಿದ್ದೆ. ಇವರು ಎನ್‌ಕ್ವೈರಿ ಮಾಡುವಾಗ ಯಾವ ಆಧಾರದ ಮೇಲೆ ಮಾಡುತ್ತಾರೆ? ಇಲ್ಲಿ ಇಬ್ಬರು ಒಳ್ಳೆಯ ಡಾಕ್ಟರು ಇದ್ದಾರೆ. ಅವರು ಡಾಕ್ಟರ್ ರಾಜಲಕ್ಷ್ಮಮ್ಮ ಎನ್ನುವರು. ಇವರು ಮಾಡಿರುವ ತನಿಖೆಯ ಮೇಲೆ ಮತ್ತೇ ದೇಸಾಯಿಯವರು ವಿಚಾರಣೆ ಮಾಡಬೇಕಾಗಿದೆಯೇನು ಡಾಕ್ಟರು ರಾಜಲಕ್ಷ್ಮಮ್ಮ ಎನ್ನುವರು ೧೯೬೭ರಿಂದ ಪೋಸ್ಟ್ ಗ್ರಾಜುಯೇಟು ಪ್ರೊಫೆಸರಾಗಿದ್ದಾರೆ. ಅವರು ಒಂದು ವರ್ಷಕ್ಕೆ ಎಂಟು ಜನ ಎಂ ಎ ಮತ್ತು ಡಿ ಜಿ ಓ ಪರೀಕ್ಷೆಗಳನ್ನು ಓದುವ ಪೋಸ್ಟ್ ಗ್ರಾಜುಯೆಟು ಸ್ಟೂಡೆಂಟುಗಳನ್ನು ತಯಾರು ಮಾಡುತ್ತಿದ್ದಾರೆ. ಇದಲ್ಲದೆ ಅವರು ಮೂರು ಯೂನಿವರ್ಸಿಟಿಗಳಿಗೂ ಪೋಸ್ಟ್ ಗ್ರಾಜುಯೇಟು ಎಕ್ಸಾಮಿನ್ ರಾಗಿದ್ದಾರೆ, ಆದರೆ ನಮ್ಮ ಡಾಕ್ಟರು ದೇಸಾಯಿ ಎನ್ನುವರು ಮೊದಲುಮ ಲ್ಕೇಶ್ವರದ ಆಸ್ಪತ್ರೆಯನ್ನು

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಒಂದು ನರ್ಸಿಂಗು ಹೋಮಾಗಿ ಮಾಡಿಕೊಂಡಿದ್ದರು. ಇಲ್ಲಿಂದ ಅವರನು ಬೌರಿಂಗು ಹಾಗೂ ಲೇಡಿಕರ್ಜನ್ ಆಸ್ಪತ್ರೆಗೆ ವರ್ಗ ಮಾಡಿದರು. ಇಲ್ಲಿಗೆ ಬಂದ ಮೇಲೆ ಇಲ್ಲಿ ಬೇಕರಿ ಹಾಗೂ ಗ್ಲೂಕೋಸು ತಯಾರಿಕೆ ಮಾಡಲು ಆರಂಭ ಮಾಡಿದರು. ಇವರಿಗೆ ಟೀಚಿಂಗು ಅಭ್ಯಾಸವೇ ಮರೆತು ಹೋಗಿದೆ ಎಂದು ಇವರು ಪ್ರೊಫೇಸರು ಆಗಲು ಹೋಗಲಿಲ್ಲ ಇದಕ್ಕಾಗಿ ಇವರನ್ನು ಬೌರಿಂಗು ಆಸ್ಪತ್ರೆಗೆ ವರ್ಗ ಮಾಡಿದರು. ಇಂತಹವರನ್ನು ನೀವು ಡಾಕ್ಟರು \ರಾಜಲಕ್ಷಮ್ಮನವರ ಮೇಲೆ ತನಿಖೆಗೆ ಹಾಕಬಹುದೇ?

DR. RAJALAKSHAMMA is such a nice ady Doctor. ಇವರು ಪ್ರತಿಯೊಬ್ಬರೂ ಹೆದರಿ ಮತ್ತು ಬೆದರಿ ನಡೆಯುವಂತವರು. ಡಾಕ್ಟರ್ರು ದೇಸಾಯಿರವರನ್ನು ಎನ್‌ಕ್ವೈರಿ ಆಫೀಸರಾಗಿ ನೇಮ ಕಮಾಡಲು ಕಾರಣವಾದರೂ ಏನು? ಇವರಿಗೂ ಅವರಿಗೂ ಇರತಕ್ಕ ಸ್ಪೆಷಲ್ ರಿಲೇಷನ್‌ಷಿಪ್ ಏನು? ಆದರೆ ನಾನು ಡಾಕ್ಟರ್ ದೇಸಾಯಿಯವರ ಮೇಲೆ ಡೆಫ್‌ನೇಟ್ ಆಗಿ ಅಲಿಗೇಷನ್ ಮಾಡುತ್ತಿದ್ದಾನೆ. As a responisble M. L. A. I am making this allegation. ಎನ್‌ಕ್ವೈರಿ ಮಾಡಬೇಕಾದರೆ ಮೇ ಎರಡನೆಯ ತಾರೀಖು ಅನೆಕಲ್‌ನಲ್ಲಿ ದೇಸಾಯಿಯವರು ಒಂದು ಅಪರೇಷನ್ ನಡೆಸಿದ್ದಾರೆ. ಅವರು ಅಪರೇಷನ್ ನಡೆಸಿದಾಗ ಯಾರು ಇದ್ದರು ಎಂದರೆ ಅವರ ಮಕ್ಕಳು ಮೂರು ಜನ, ಒಬ್ಬರು ಎಸ್ ಎಸ್ ಎಲ್ ಸಿ ಗರ್ಲ್ ಒಬ್ಬನು ಪಿ ಯು ಸಿ ಸ್ಟೂಡೆಂಟು, ಇನ್ನೊಬ್ಬ ಮೆಡಿಕಲ್ ಸ್ಟೂಡೆಂಟು ಮೂರು ಜನ ಲೇಡಿ ಡಾಕ್ಟರುಗಳು ಇದ್ದರೂ ಕೂಡ ಅವರ ಸಹಾಯ ತೆಗೆದುಕೊಳ್ಳಲಿಲ್ಲ. ಅವರ ಹೆಸರುಗಳು ಏನೆಂದರೆ ಒಬ್ಬರು ಡಾಕ್ಟರು ಸುಹಾಸಿನಿ. ಇನ್ನೊಬ್ಬರು ಡಾಕ್ಟರು ಲೀಲಾವತಿ ಮತ್ತು ಒಬ್ಬರು ಡಾಕ್ಟರು ಮುನಿರಾ ಬೇಗಂ. ಆಸ್ಪತ್ರೆಗೆ ಬರತಕ್ಕ ರೋಗಿಗಳು ಗಿನೀ ಪಿಗ್ಸ್ ಎಂದು ತಿಳಿದುಕೊಂಡಿದ್ದಾರೆಯೇ. ಇದು ನನ್ನ ಅಪಾದನೆ. ಅದರ ಮೇಲೆ ಏನು ಆಕ್ಷನ್ ತೆಗೆದುಕೊಳ್ಳುತ್ತೀರಿ. ಸಸ್‌ಪೆಂಡು ಮಾಡುತ್ತೀರಾ ಮಾಡಿ ನೋಡೋಣ.

Mater exputnged as ordered by the hair

ಅಂಥ ದೊಡ್ಡ ಡಾಕ್ಟರುಗಳೇ ಸರಿಯಾಗಿ ನಿಗಾ ಇಟ್ಟು ಕೆಲಸಮಾಡುತ್ತಿಲ್ಲ. ಹೀಗಿರುವಾಗ ಮುನಿರಾಬೇಗಂ ಏನು ಪಾಪ ಮಾಡಿದ್ದಾಳೆಂದು ಆಕೆಯನ್ನು ಸಸ್‌ಪೆಂಡ್ ಮಾಡಿದಿರಿ?
೬-೦೦ p m

One of my sisters happens to be a doctor there ಆ ವಾರ್ಡ್ ಎಲ್ಲಿದೆಯೋ ಏನೋ ನಾನು ಅಲ್ಲಿಗೆ ಹೋಗಿಯೇ ಇಲ್ಲ. ಆದರೂ ನಾಗರತ್ನಮ್ಮ ಹೇಳಿಕೊಟ್ಟಿದ್ದಾಳೆ. ಇದೆಲ್ಲಾ ಪಾಲಿಟಿಕ್ಸ್ ಎಂದು ಹೇಳುತ್ತಿದ್ದಾರಂತೆ. ಆಕೆಗೂ ಹತ್ತಾರು ವರ್ಷ ಸರ್ವೀಸಾಗಿದೆ. ಫಾರಿನ್ನಿಗೆ ಹೋಗಿ ಬಂದಿದ್ದಾಳೆ ಆಕೆಗೆ ಯಾರೇನು ಹೇಳಿಕೊಡುವುದಿದೇ?

ಶ್ರೀ ಎಸ್. ಚನ್ನಯ್ಯ : ಮಾನ್ಯ ಸದಸ್ಯರು ಮಾತನಾಡುತ್ತಿರುವುದರಲ್ಲಿ ಅವರು ಏನು ಹೇಳುತ್ತಿದ್ದಾರೆ ಎಂಬುದು ಒಂದೂ ಅರ್ಥವಾಗುತ್ತಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ: ದಯವಿಟ್ಟು ಮಧ್ಯೆ ಯಾರೂ ಪ್ರಶ್ನೆ ಮಾಡಬೇಡಿ.

ಆ ಸತ್ತು ಹೋದ ಹೆಣ್ಣು ಮಗಳಿಗೆ ಹೆರಿಗೆಯಾದ ಕೂಡಲೆ ಅಂದಕೆಳ ದಿನಗಳ ಮೇಲೆ ಟ್ಯೂಬಕ್ಟಮಿ ಅಪರೇಷನ್ನನ್ನು ಮಾಡಲಾಗಿತ್ತು. ಆಕೆ ಚೆನ್ನಾಗಿ ಆರೋಗ್ಯವಾಗಿಯೇ ಇದ್ದಳು. ಆ ನಂತರ ಆಕೆಮರಣಹೊಂದಿದರೆ ಅದಕ್ಕೆ ಆ ಟ್ಯೂಬಕ್ಟಮಿ ಅಪರೇಷನ್ ಕಾರಣವಲ್ಲ ಎಂದು ಹೇಳಿದ್ದರೂ ಮತ್ತೆ ಈ ದೇಸಾಯಿ ಅವರಿಗೆ ವಿಚಾರಣೆ ಮಾಡಲು ಕಾರಣವೇನು ಹಾಗೆ ಇವರಿಗೆ ಅನುಮಾನವಿದ್ದ ಪಕ್ಷಕ್ಕೆ ವಿಚಾರಣೆ ಮಾಡಲು ಇವರು ಡಾಕ್ಟರು ಕೃಷ್ಣಮೆನನ್ನರನ್ನು ಇಲ್ಲವೇ ಡಾಕ್ಟರ್ ಲಕ್ಷ್ಮಣಸ್ವಾಮಿ ಮೊದಲಿಯಾರರನ್ನೊ ಕರೆಯಬಹುದಾಗಿತ್ತು. ಅಂಥವರನ್ನು ಕೈಬಿಟ್ಟು ಕೆಲಸಕ್ಕೆ ಬಾರದ, ಈ ದೇಸಾಯಿ ಅವರು ವಿಚಾರಣೆ ಮಾಡಲು ಇವರಿಗೆ ಯಾವ ಅರ್ಹತೆಯಿತ್ತು ಇವರು ಮಂತ್ರಿಗಳ ಹಿಂದೆ ಮುಂದೆ ತಿರುಗಾಡತ್ತಿದ್ದಾರೆಂದು ಇವರಿಗೆ ಆ ಕೆಲಸಕೊಡಲಾಯಿತೇ ಅವರು ಈ ದಿವಸ ಹೆಂಗಸರ ಮಾನ ಮರ್ಯಾದೆಯನ್ನು ಕಳೆಯುತಕ್ಕಂಥ ಕೆಲಸ ಮಾಡಿದ್ದಾರೆ.

This is disgraceful, I tell you.

Government it self is responsbile for the death because there was deficiency of oxygen cylinder, blood transfusion arrangement, lack of essential equipments like blood pressure tester, thermometer, syringes, linen and even water.

You did not have even water there

ಇಷ್ಟೆಲ್ಲಾ ಅಲ್ಲಿ ಅನೀವನ್ ಕಂಡೀಷನ್ನುಗಳಿದ್ದಾಗ್ಗೂ ಅವರು ಅಲ್ಲಿ ಸಾಕಷ್ಟು ಎಚ್ಚರಿಕೆಯಿಂದ ಕೆಲಸಮಾಡಿದ್ದಾರೆ. ಸಭೆಯ ಗಮನಕ್ಕೆ ನಾನು ಕೆಲವು ಅಂಕೀಅಂಶಗಳನ್ನು ತರುವುದಾದರೆ ಅಲ್ಲಿ

Tubectomy 1967–25,973 operations 3 deaths
1968–one death of similar type
1969–one death

೧೯೭೦ ರಲ್ಲಿಯೂ ಒಬ್ಬ ಹೆಣ್ಣುಮಗಳು ಹೆರಿಗೆಯಾದ ನಂತರ ಸತ್ತಳು. ಆಕೆ ಸತ್ತದಕ್ಕೆ ಕಾರಣ ಸಾಮಾನ್ಯವಾಗಿ ಹೆರಿಗೆಯಾದ ಮೂರು ನಾಲ್ಕು ದಿನಗಳ ಮೇಲೆ ಬಾಣಂತಿ ನಂಜು ಅಂತ ಬರುತ್ತೆ. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಇಲ್ಲಿಯೂ ಕೂಡ ಅದೇ ರೀತಿ ಆ ಹೆಣ್ಣುಮಗಳು ಹೆರಿಗೆಯಾದ ನಂತರ ಟ್ಯೂಬಕ್ಟಮಿ ಶಸ್ತ್ರ ಚಿಕಿತ್ಸೆಯನ್ನು ಮಾಡಿಕೊಂಡಿದ್ದರೂ ಮೂರು ನಾಲ್ಕು ದಿನಗಳು ಚೆನ್ನಾಗಿಯೇ ಇದ್ದವಳು ಆ ನಂತರ ಸತ್ತಿದ್ದಾಳೆ ಅದಕ್ಕೆ ಕಾರಣ ಈ ಟ್ಯೂಬಕ್ಟಮಿ ಅಲ್ಲ ಎಂದು ನ್ಯೂರೋ ಸರ್ಜನ್ ಸರ್ಟಿಫೈಮಾಡಿದ್ದಾರೆ. ಅದನ್ನು ಗಣನೆಗೆ ತಂದುಕೊಳ್ಳದೆ ಆಕೆಯನ್ನು ಹೇಗೆ ಸಸ್‌ಪೆಂಡ್ ಮಾಡಿದರು?

I am the President of All India Conference– National Family Plaening. In spite of so many handicaps these doctors take so much of risk and work. What should happen to yozr fam'ly planning work.

ಆದರೆ ಆ ಲೇಡಿ ಡಾಕ್ಟರು ವಿಚಾರಣೆ ಅಂತ ಹೇಳಿದ ಕೂಡಲೇ ಇವರನ್ನು ಬಂದು ಆಕೆ ಸಮಾಧಾನ ಮಾಡಿದ್ದರೆ ಎಲ್ಲವೂ ಸರಿಹೋಗುತ್ತಿತ್ತು. ಅದನ್ನು ಆಕೆ ಮಾಡಲಿಲ್ಲ ನಾನು ಸಾಮಾನ್ಯವಾಗಿ ಈ ಡಾಕ್ಟರುಗಳ ಬಗ್ಗೆ ಶಿಪಾರ್ಸನ್ನು ಮಾಡತಕ್ಕವಳೇ ಅಲ್ಲ ಏಕೆಂದರೆ ಅವರಲ್ಲೂ ಅನೇಕರು ಕೊರಮರಿದ್ದಾರೆ ಹರಾಮಿಗಳಿದ್ದಾರೆ. ಎಲ್ಲರನ್ನೂ ಒಂದೇ ಎಂದು ಹೇಳತಕ್ಕವಳಲ್ಲ. ಹೀಗೆ ಶ್ರದ್ಧೆ ವಹಿಸಿ ಕೆಲಸಮಾಡತಕ್ಕವರ ಬಗ್ಗೆಯೂ ಹೀಗೆ ದೋಷಾರೋಪಣೆಗಳನ್ನು ವಿನಾ ಕಾರಣ ಮಾಡುತ್ತಾ ಹೋದರೆ ಮುಂದೆ ಸಂತಾನನಿರೋಧ ಗರ್ಭದ ಶಸ್ತ್ರ ಚಿಕಿತ್ಸೆಗೆ ಧೈರ್ಯವಾಗಿ ಯಾರು ಬರುತ್ತಾರೆ, ಮುಂದಕ್ಕೆ ಈ ಫ್ಯಾಮಿಲಿ ಪ್ಲಾನಿಂಗ್ ಗತಿಯೇನಾಗಬೇಕು, ಅವರಿಗೆ ಆ ನಾಲ್ಕು ರೂಪಾಯಿಗಳನ್ನು ರೀಇಂಬರ್ಸ್ ಮಾಡುವುದಕ್ಕೆ ಅವಕಾಶ ಮಾಡಿಕೊಡಲಿಲ್ಲ ಎಂದು ಅವರು ಹೀಗೆ ದೂರನ್ನಿತ್ತರೇ?

Without any reason, without any Justification you have done that. This is such a crime on the part of the Government. It is a shameful thing.

ಜೀವನ ಮಾಡುವುದಕ್ಕೆ ಬೇರೇನೂ ಮಾರ್ಗವಿಲ್ಲದ ಹೆಂಗಸರನ್ನು ಹೇಳುವುದಕ್ಕೂ ಕೇಳುವುದಕ್ಕೂ ಹಿಂದೆ ಮುಂದೆ ಯಾರೂ ಇಲ್ಲದಂಥ ಹೆಣ್ಣುಮಕ್ಕಳನ್ನು ಹೀಗೆಲ್ಲಾ ಟ್ರೀಟ್ ಮಾಡುವುದು ಬಹಳ ಹೀನಾಯಕರವಾದ್ದು ಎಂದು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ನಂಜಪ್ಪ (ಶಾಂತಿನಗರ) :— ಶ್ರೀಮತಿ ನಾಗರತ್ನಮ್ಮನವರು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಕೆಲವು ಅಲ್ಲಸಲ್ಲದ ಸುಳ್ಳು ಆಕ್ಷೇಪಣೆಗಳನ್ನು ಮಾಡಿದ್ದಾರೆ. ಅದಕ್ಕಾಗಿ ಅಧ್ಯಕ್ಷರು ನನಗೆ ೩ ನಿಮಿಷಗಳನ್ನಾದರೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಬಿ. ಪಿ. ಗಂಗಾಧರ್: ನನ್ನ ಅರ್ಧ ಗಂಟೆಯ ಚರ್ಚೆಯ ವಿಚಾರವೇನಾಯಿತು.

ಅಧ್ಯಕ್ಷರು: ಅದನ್ನು ಆರೂವರೆ ಗಂಟೆಗೆ ಇಟ್ಟುಕೊಳ್ಳೋಣ. ಸಭೆ ೭ ಗಂಟೆವರೆಗೂ ಕೂಡುತ್ತೆ. ಈಗ ಚರ್ಚೆಯನ್ನು ಶ್ರೀ ಶ್ಯಾಮಣ್ಣನವರು ಪ್ರಾರಂಭಮಾಡಲಿ.

ಶ್ರೀ ಎ. ನಂಜಪ್ಪ: ಸ್ವಾಮಿ, ಅಧ್ಯಕ್ಷರೇ, ನಾನು ಕೇಳಿದ......

ಅಧ್ಯಕ್ಷರು: ತಮಗೆ ನಾನು ಆನಂತರ ಕರೆಯುತ್ತೇನೆ: ಆಗ ತಾವು ಮಾತನಾಡಬಹುದು. ಈಗ ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು ಕೋಟೆ) — ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದೆ ಇಟ್ಟಿರತಕ್ಕ ಈ ಸಪ್ಲಿಮೆಂಟರಿ ಬೇಡಿಕೆಗಳಲ್ಲಿ ಪ್ರತ್ಯಕ್ಷವಾಗಿ ೫ ಕೋಟಿ ರೂಪಾಯಿಗಳನ್ನು ಕೇಳಿದ್ದರೂ ಅಪ್ರತ್ಯಕ್ಷವಾಗಿ ಇದರಲ್ಲಿರತಕ್ಕ ಟೋಕನ್ ಗ್ರಾಂಟುಗಳನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡರೆ ಈಗ ಕೇಳಿರತಕ್ಕ ಮೊಬಲಗು ೫ ಕೋಟಿಯ ೩-೪ ಪಟ್ಟು ಜಾಸ್ತಿಯಾಗುತ್ತದೆ. ಸಾಮಾನ್ಯವಾಗಿ ಬಜೆಟ್ಟನ್ನು ತಯಾರು ಮಾಡುವಾಗ ನಮ್ಮ ಮಂತ್ರಿಗಳು ಅದಕ್ಕೆ ತಕ್ಕ ಗಮನವನ್ನು ಕೊಡದೆ ಸಾಕಷ್ಟು ಆಸಕ್ತಿಯನ್ನು ವಹಿಸದೆ ತಮಗೆ ಬೇಕಾದ ರೀತಿಯಲ್ಲಿ ಹಣವನ್ನು ಹಂಚಿಕೊಳ್ಳುವುದಕ್ಕೆ ಹೀಗೆ ಏನೋ ಒಂದು ಅಂದಾಜನ್ನು ತಯಾರಿಸಿದ ಹಾಗೆ ಕಾಣುತ್ತದೆ. ಇದು ಬಹಳ ಶೋಚನೀಯವಾದ ವಿಚಾರ.

ಈಗ ಮೊದಲನೆಯದಾಗಿ ಹೇಳುವುದೇನೆಂದರೆ ಇಲ್ಲಿರತಕ್ಕಂಥ ಬೇಡಿಕೆಯಲ್ಲಿ ಸುಮಾರು ಅರ್ಧ ಭಾಗದಷ್ಟು ಸಾಲಗಳನ್ನಾಗಿ ಕೊಡುವುದಕೋಸ್ಕರ ಖರ್ಚು ಹಾಕಿದ್ದೀರಿ ಸರ್ಕಾರದವರು ಇದುವರೆಗೆ ನಾನಾವಿಧವಾಗಿ ಸಾಲಗಳನ್ನು ಕೊಟ್ಟಿದ್ದಾರೆ. ಇನ್‌ಫ್ಲೂಯೆನ್ಸ್‌ನಿಂದ ನೆಪೊಟಿಸಿಸಮನಿಂದ ಮತ್ತು ಬೇರೆ ಬೇರೆ ಒತ್ತಡಗಳಿಂದ ಸರ್ಕಾರ ಸಾಲ ಕೊಟ್ಟಿದೆ.

ಉದಾಹರಣೆ ಹೇಳುವುದಾದರೆ ಅಗ್ರಿಕಲ್‌ಚರಲ್ ಲೋನ್, ಇಂಡಸ್ಟ್ರಿಯಲ್ ಲೋನ್ ಕೋ-ಆಪರೇಟಿವ್ ಸೊಸೈಟಿಗೆ ಕೊಟ್ಟಿರತಕ್ಕಂಥ ಲೋನ್ ಇನ್ನೂ ಅನೇಕ ವಿಧದಲ್ಲಿ ಲೋನ್ ಸರ್ಕಾರ ಕೊಟ್ಟಿದ್ದಾಗಿದೆ. ಇದರಬಗ್ಗೆ ಇದುವರೆಗೆ ಎಷ್ಟು ವಸೂಲಾಗಿದೆ ಎನ್ನುವ ಒಂದು ಲೆಕ್ಕಾಚಾರವನ್ನು ಇಟ್ಟಿದ್ದಾರೆಯೋ? ಈ ರೀತಿ ಲೋನ್ ಹಂಚಿದರೆ ಜನಗಳಿಗೆ ಅನುಕೂಲವಾಗುತ್ತದೆ ಎಂದು ಮಾಡಿದ್ದೀರಾ?

ಇನ್ನು ಬೆಂಗಳೂರು ಕಾರ್ಪೊರೇಷನ್ನಿನ ವಿಷಯ ಹೇಳಬೇಕಾದರೆ ಬೆಂಗಳೂರು ಕಾರ್ಪೊರೇಷನ್ ಎಲೆಕ್ಷನ್ನಿಗೋಸ್ಕರ ಎಲೆಕ್ಟೋರಲ್‌ರೋಲನ್ನು ಬೇರೆ ರೀತಿಯಲ್ಲಿ ಮಾಡಬೇಕೆಂದುಮಾಡಿದಿರಿ. ಈಗ ಮೊದಲು ಇದ್ದ ಹಾಗೆ ಅಸೆಂಬ್ಲಿ ಎಲೆಕ್ಟೊರಲ್‌ರೋಲಿನಂತೆ ಮಾಡಬೇಕುಅಂತ ನಿಬಂಧನೆ ಮಾಡಿದ್ದೀರಿ. ಇದರ ವೈಶಿಷ್ಟ್ಯ ನೋಡಿದರೆ ಅದಕ್ಕೆ ಆಗಿರತಕ್ಕಂಥಾ ಖರ್ಚೆಲ್ಲಾ ವ್ಯರ್ಥವಾಯಿತು ಬೇರೆ ರೀತಿಯಲ್ಲಿ ಎಲೆಕ್ಟೊರಲ್‌ರೋಲ್ ತಯಾರುಮಾಡಬೇಕೆಂದು ಬಹಳ ಆಫೀಸರನ್ನು ನೇಮಕ ಮಾಡಿ ದುಡ್ಡು ಖರ್ಚು ಮಾಡಿದ್ದೀರಿ. ಈ ರೀತಿ ಅವ್ಯವಸ್ಥೆ ಮಾಡಿ ದುಡ್ಡು ವ್ಯರ್ಥ ಮಾಡಿದ್ದೀರಿ ಎಂದು ಹೇಳುತ್ತೇನೆ.

ಇನ್ನು ಎಕ್ಸ್‌ಪೋ ೭೦ರ ಬಗ್ಗೆ ಹಿಂದೆ ಸಾಕಷ್ಟು ಮಾತನಾಡಿದ್ದಾರೆ. ಆದರೆ ಅದರ ವಿಷಯದಲ್ಲಿ ಬೆಂಗಳೂರಿನ ನಾಗರೀಕರ ಬಗ್ಗೆ ಮಾತನಾಡಬೇಕಾದರೆ ಸರ್ಕಾರದವರು ಮಾಡಿರತಕ್ಕಂಥ ಅನ್ಯಾಯ ಏನೆಂದರೆ ಒಂದು ಸರಿಯಾದ ಕ್ರಮವನ್ನು ಅನುಸರಿಸದೇ ಇದ್ದುದರಿಂದ ಹುಡುಗರು ಬಹಳ ಉದ್ರೇಕಗೊಂಡು ಬೆಂಗಳೂರಿನ ದೊಡ್ಡ ದೊಡ್ಡ ರಸ್ತೆಗಳಲ್ಲಿ ಇರುವ ಲೈಟುಗಳನ್ನು ಒಡೆದುಹಾಕಿ ನಾನಾವಿಧವಾದಂಥ ನಷ್ಟಗಳನ್ನು ಮಾಡಿದ್ದಾರೆ. ಮುಖ್ಯವಾಗಿ ನಾಗರೀಕರಿಗೆ ಆಗಿರತಕ್ಕಂಥ ತೊಂದರೆ ಏನೆಂದರೆ ಹುಡುಗರು ಲೈಟುಗಳನ್ನು ಒಡೆದು ಹಾಕಿರುವುದರಿಂದ ನಗರದ ಆ ರಸ್ತೆಗಳೆಲ್ಲಾ ಕತ್ತಲೆಯಾಗಿದೆ ಆದ್ದರಿಂದ ಕಾರ್ಪೊರೇಷನ್ನಿನವರು ಇದಕ್ಕೆ ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ. ಈ ಎಕ್ಸ್‌ಪೋ ಟೀಮಿಗೆ ೬ ಲಕ್ಷರೂಪಾಯಿ ಬೇಡಿಕೆ ಕೇಳಿರುವುದರಿಂದ ಇದರ ಬಗ್ಗೆ ನಾನು ಹೇಳುವುದು, ಇದನ್ನು ಬೆಂಗಳೂರಿನ ನಾಗರೀಕರ ಮೇಲೆ ಅನಾವಶ್ಯಕವಾಗಿ ಹಾಕಬಾರದು ಟೀಮನ್ನು ಕಳುಹಿಸುವುದಕ್ಕೆ ಯಾರು ಏರ್ಪಾಡು ಮಾಡಿದರೋ ಅವರಿಂದಲೇ ವಸೂಲ್ಮಾಡಬೇಕೇ ವಿನಃ ಬೆಂಗಳೂರಿನ ನಾಗರೀಕರು ಕೊಡತಕ್ಕಂಥಾದ್ದು ಅನ್ಯಾಯ. ಮತ್ತು ನ್ಯಾಷನಲ್ ಕಾಲೇಜು ಆಗಲಿ, ಯೂನಿವರ್ಸಿಟಿ ಕಾಲೇಜು ಆಗಲಿ ಅಲ್ಲಿ ಅನಾಹುತವಾಗಿರುವುದರಿಂದ ಇದಕ್ಕೆ ಯಾರು ಕಾರಣರು ಅವರಿಂದ ಖರ್ಚು ಮಾಡಿಸಬೇಕೆ ವಿನಃ ಬೆಂಗಳೂರಿನ ಕಾರ್ಪೊರೇಷನ್ನಿನವರಿಂದ ಖರ್ಚುಮಾಡಿಸುವುದು ಬಹಳ ಅನ್ಯಾಯ. ಈಗ ಖರ್ಚಾಗಿರುವ ೬ ಲಕ್ಷರೂಪಾಯಿ ಜೊತೆಗೆ ಆ ಖರ್ಚನ್ನೂ ಸಹ ಅವರಿಂದಲೇ ವಸೂಲ್ಮಾಡಬೇಕೆಂದು ನಾನು ಹೇಳುತ್ತೇನೆ. ಸ್ಟೇಟ್ ಪ್ರಪರ್ಟಿ ವೇಸ್ಟ್

ಆಗಿರುವುದರ ಜೊತೆಗೆ ಪ್ರಾಪರ್ಟಿಕೂಡ ಎಷ್ಟೋವೇಸ್ಟ್ ಆಗಿದೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ ಈ ನಷ್ಟವನ್ನು ಅನ್ಯಾಯವಾಗಿ ಸರ್ಕಾರದವರು ಯಾರು ಇದಕ್ಕೆ ಸಂಬಂಧಪಟ್ಟಿಲ್ಲವೇ ಅವರ ಮೇಲೆ ಹೇರು ವುದು ಸರಿಯಾದುದಲ್ಲ. ಯಾರು ಅನ್ಯಾಯ ಮಾಡಿದ್ದಾರೆ. ಯಾರು ಅಕ್ರಮ ಮಾಡಿದ್ದಾರೆ ಅವರ ಮೇಲೆ ಪೆನಾಲ್ಟಿ ಹಾಕಿ ಸರ್‌ಛಾರ್ಜು ಹಾಕಿ ವಸೂಲ್ಮಾಡಿ ಇದನ್ನು ಬೆಂಗಳೂರಿನ ನಾಗರೀಕರ ಮೇಲೆ ಹಾಕಬಾರದು ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ರಸ್ತೆಗಳಲ್ಲಿ ಲೈಟುಗಳನ್ನು ಒಡೆದು ಅದರಿಂದ ಕಗ್ಗತ್ತಲೆ ಮಾಡಿ ಜನಗಳಿಗೆ ತೊಂದರೆ ಮಾಡಿದ್ದಾರೆ. ಇದಕ್ಕೆ ಯಾರು ಕಾರಣರೋ ಅವರಿಂದ ಬೆಂಗಳೂರಿನ ನಾಗರೀಕರ ಮೇಲೆ ಈ ಹೊರೆಯನ್ನು ಹಾಕಬೇಡಿ ಎಂದು ಹೇಳುತ್ತೇನೆ.

ಇನ್ನು ನೀರಿನ ಬೇಡಿಕೆ ವಿಚಾರವಾಗಿ ಹೇಳಬೇಕಾಗಿದೆ. ರೂರಲ್ ವಾಟರ್ ಸಪ್ಲೈ ಸ್ಕೀಂ ಅಂತ ಏನು ಇದೆಯೋ ಅದರ ಮೂಲಕ ಎಲ್ಲೆಲ್ಲಿ ನೀರಿನ ವ್ಯವಸ್ಥೆ ಚೆನ್ನಾಗಿಲ್ಲ ಅಂತಹ ಕಡೆ ಸಹಾಯ ಮಾಡಬೇಕು ಅಂತ ಇರುವುದನ್ನು. ಈ ಸಂದರ್ಭದಲ್ಲಿ ಹೇಳುವುದಾದರೆ ಕಾವೇರೀ ಸ್ಕೀಂನ್ನು ಇಂಪ್ಲಿಮೆಂಟ್ ಮಾಡಿ ಬೆಂಗ ಳೂರಿಗೆ ನೀರನ್ನು ತರುತ್ತೇವೆಂದು ಅನೇಕ ವರ್ಷಗಳಿಂದಲೂ ಹೇಳುತ್ತಿದ್ದಾರೆ. ಈಗ ಬೆಂಗಳೂರಿನ ಜನರು ಒಂದು ಸಾವಿರ ಗ್ಯಾಲನ್ ನೀರಿಗೆ ೪ ರೂಪಾಯಿ ಕೊಡಬೇಕಾಗಿದೆ. ಹಿಂದೆ ಒಂದು ರೂಪಾಯಿ ಕೊಡುತ್ತಾ ಇದ್ದರು ಇದನ್ನು ತಾವು ಯೋಚನೆ ಮಾಡಬೇಕು. ರೂರಲ್ ವಾಟರ್‌ಸಪ್ಲೈ ಸ್ಕೀಂಗೆ ಯಾವರೀತಿ ಸಹಾಯ ಮಾಡುತ್ತಾರೋ ಅದೇರೀತಿ ನಮ್ಮ ಸರ್ಕಾರದವರೂ ಮತ್ತು ಕೇಂದ್ರ ಸರ್ಕಾರದವರೂ ಅವರವರ ಭಾಗವ ನ್ನು ವಹಿಸಿಕೊಂಡು ಸರಿಯಾದ ಒಂದು ಪ್ರೋಗ್ರಾಮನ್ನು ಹಾಕಿಕೊಂಡು ಜನರಿಗೆ ೪ರ ರೂಪಾಯಿ ಬೀಳದಂತೆ ನೀರು ಒದಗಿಸ ಬೇಕು ಎಂದು ಹೇಳುತ್ತೇನೆ.

ಇನ್ನು ಎಲೆಕ್ಟ್ರಿಸಿಟಿ ಬಗ್ಗೆ ಒಂದು ಕಾರ್ಪೋರೇಷನ್ ಮಾಡಬೇಕು ಎಂದು ಮಾಡಿದ್ದಾರೆ, ಸರ್ಕಾರದವ ರು ರಚಿಸತಕ್ಕಂಥ ಕಾರ್ಪೋರೇಷನ್ಸ್, ಬೋರ್ಡ್ಸ್, ಕಮಿಟಿಗಳು ಇವುಗಳ ಮೇಲೆ ಜನರಿಗೆ ನಂಬಿಕೆ ಹೋಗಿದೆ ಈಗ ಇರುವ ಟ್ರಸ್ಟ್ ಬೋರ್ಡ್ ಮೇಲೂ ಜನರಿಗೆ ನಂಬಿಕೆ ಹೋಗಿದೆ ಹಿಂದೆ ಎಲೆಕ್ಟ್ರಿಸಿಟಿ ಛಾರ್ಜು ೨ ಕಾಸುಕೊಡುತ್ತಾ ಇದ್ದ ಜಾಗಕ್ಕೆ ಈಗ ೨೦ ಪೈಸೇ ಕೊಡಬೇಕಾಗಿದೆ, ಮತ್ತು ದಿನೇ ದಿನೇ ರೇಟನ್ನುಏರಿಸುತ್ತಾ ಇದ್ದಾರೆ. ಈ ಬೋರ್ಡ್‌ನಿಂದ ಜನಗಳಿಗೆಅನ್ಯಾಯವಾಗುತ್ತಿದೆ. ಆದುದರಿಂದ ಕಾರ್ಪೋರೇಷನ್ ಬೋರ್ಡ್ ಅಂತ ಮಾಡಿದೆ. ಸರ್ಕಾರದವರೇ ನಡೆಸಿಕೊಂಡು ಹೋಗುವಂತೆ ಮಾಡಬೇಕು ಅದೇ ರೀತಿ ಎಲೆಕ್ಟ್ರೀಸಿಟಿ ಬೊ ರ್ಡ್‌ನ್ನು ತಾವೇ ತೆಗೆದುಕೊಳ್ಳಬೇಕು ಶರಾವತಿಯನ್ನು ಯಾವರೀತಿ ನೀವೇ ತೆಗೆದುಕೊಂಡು ಮಾಡುತಿ ದಿ ರೋ ಅದೇರೀತಿ ಈ ಎಲೆಕ್ಟ್ರಿಸಿಟಿ ಬೋರ್ಡ್‌ನ್ನು ತೆಗೆದುಕೊಂಡು ನಡೆಸಿ ಹಾಗಾದರೆ ಅದರಲ್ಲಿ ಲೋಪದೋಷ ಗಳನ್ನು ತಿದ್ದುವುದಕ್ಕೆ ಈ ಅಸೆಂಬ್ಲಿಮುಂದೆ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದನ್ನು ಒಂದು ಬೋರ್ಡ್ ಎಂದು ಮಾಡಿದರೆ ಇದು ಒಂದು ಸ್ಟ್ಯಾಚೂಟರಿ ಬೋರ್ಡ್ ಆಗುತ್ತದೆ. ಆ ಸ್ಟ್ಯಾಚೂಟರಿ ಬೋರ್ಡ್‌ನ್ನು ಏನೂಕೇಳುವುದಕ್ಕೆ ನಮಗೆ ಅಧಿಕಾರವಿಲ್ಲ ಆದುದರಿಂದ ಅದನ್ನು ಸರ್ಕಾರದವರು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡರೆ ಅನುಕೂಲವಾಗುತ್ತದೆ.

ಇನ್ನು ಎಜುಕೇಟೆಡ್ ಅನ್‌ಎಂಪ್ಲಾಯಿಸ್‌ಗೆ ೫೦೦ ಜನಕ್ಕೆಅನುಕೂಲ ಮಾಡಿದ್ದೇವೆ ಎಂದು ಬೇಡಿಕೆ ಇಟ್ಟಿದ್ದಾರೆ. ಎಜುಕೇಟೆಡ್ ಅನ್‌ಎಂಪ್ಲಾಯ್ಡ್ ಆಗಿರತಕ್ಕಂಥಾವರು ೫೦ ಸಾವಿರ ಜನ ಇದ್ದಾರೆ. ಅದರಲ್ಲಿ ೫೦೦ ಜನ ಹೋದರೆ ಇನ್ನು ಉಳಿದ ೪೯ ೫೦೦ ಜನರ ಗತಿ ಏನು ಎನ್ನುವುದನ್ನು ಯೋಜನೆ ಮಾಡಬೇಕು ಅಲ್ಲದೇ ಇನ್ನು ಎಜುಕೇಟೆಡ್ ಆದವರು ಎಷ್ಟುಜನ ಇದ್ದಾರೆ ಅವರಿಗೆ ಬಹಳ ಅನ್ಯಾಯ ಮಾಡುತ್ತಿದ್ದಾರೆ ಇದನ್ನು ಯೋಚನೆ ಮಾಡಬೇಕು.

ಇನ್ನು ಬೆಂಗಳೂರು ಡೈರಿ ಬಗ್ಗೆ ನಮ್ಮ ಸ್ನೇಹಿತರು ಸಾಕಷ್ಟು ಮಾತನಾಡಿದ್ದಾರೆ. ಬೆಂಗಳೂರು ಡೈರಿ ಲ್ಲಿ ಯಾವತ್ತು ಕೂಡ ಲಾಸ್ ಲಾಸ್ ಅಂತ ಆಗುತ್ತಾ ಇದೆ. ಅದು ಮುಚ್ಚತಕ್ಕಂಥ ಕನ್‌ಸರ್ನ್ ಹೊರತು ಬೇರೆ ಏನೂಅಲ್ಲ ತೂತುಇರುವ ಮಡಿಕೆ ಎಂದೂ ಸರಿಹೋಗುವುದಿಲ್ಲ ಈಗ ಡೈರಿಹಾಲಿನ ದರ ನೋಡಿದರೆ ಜಾಸ್ತಿಇರುತ್ತದೆ ಅದೂ ಅಲ್ಲದೆ ಬೇರೆಯವರು ಹಾಲು ಕರೆಯತಕ್ಕಂಥವರೂ ಕೂಡ ನೀರು ಬೆರೆಸುವುದು ಹೆಚ್ಚಾಗಿದೆ. ಡೈರಿಯಿಂದ ಜನಗಳಿಗೆ ಏನೂ ಅನುಕೂಲವಾಗುವುದಿಲ್ಲ ಆದುದರಿಂದ ಡೈರಿ ಲಾಭದಾಯಕವಾ ಗುವವರಿಗೆ ಅದಕ್ಕೆ ಹೆಚು ಬಂಡವಾಳ ಹಾಕತಕ್ಕದ್ದು ನ್ಯಾಯವಲ್ಲ.

ಇನ್ನು ರಿಲೀಫ್ ವರ್ಕ್ಸ್ ಕಾಮಗಾರಿ ಕೆಲಸಗಳ ಬಗ್ಗೆ ಹೇಳುವುದಾದರೆ ಕಳೆದ ೩ ದಿವಸಗಳಿಂದಲೂ ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಅನೇಕ ಕಡೆಗಳಲ್ಲಿ ಕಷ್ಟಇದೆ. ಅವರಿಗೆ ಅನುಕೂಲ ಮಾಡಿಕೊಡಬೇಕು ಎನ್ನುವ ಬಗ್ಗೆ ನಾನೂ ಒಪ್ಪುತ್ತೇನೆ. ಆದರೆ ನನ್ನ ಸಲಹೆ ಇಷ್ಟೆ, ಈಗ ಇದು ಸರಿಹೋಗಬೇಕಾದರೆ ಒಂದನೆಯದಾಗಿ ಕಂಟ್ರೋಲನ್ನು ತೆಗೆದು ಹಾಕಿ, ಎರಡನೆಯದಾಗಿ ಲೆವಿಯನ್ನು ತೆಗೆದು ಹಾಕಿ. ಈ ಲೆವಿಯಿಂದ ಬೇಕಾದಷ್ಟು ಧಾನ್ಯಗಳನ್ನು ಶೇಖರಿಸಿ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಾ ಇದೆ.

(ಶ್ರೀ ಟಿ. ಆರ್. ಶಾಮಣ್ಣ)

ಮತ್ತು ಈ ಡಿಪಾರ್ಟ್‌ಮೆಂಟಿಗೆ ಲಕ್ಷಾಂತರ ರೂಪಾಯಿ ಖರ್ಚಾಗುತ್ತಾ ಇದೆ. ಇದರಲ್ಲಿ ಉಳಿಯತಕ್ಕ ಕೋಟ್ಯಾಂತರ ರೂಪಾಯಿಗಳನ್ನು ಬೋನಸ್ ರೂಪದಲ್ಲಿ ಬೆಳೆಯುವವರಿಗೆ ಕೊಟ್ಟರೆ ಅನುಕೂಲವಾಗುತ್ತದೆ ಕಂಟ್ರೋಲ್ ಇಟ್ಟುಕೊಂಡು, ಲೆವಿ ಪದ್ಧತಿಯನ್ನು ಇಟ್ಟುಕೊಂಡು ದೊಡ್ಡ ಸಿಬ್ಬಂದಿಯನ್ನು ಇಟ್ಟುಕೊಂಡಿರುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಶಾಶ್ವತವಾದ ಕಾರ್ಯಕ್ರಮ ಹಾಕಿಕೊಳ್ಳಬೇಕೆಹೊರತು ಅನುಕೂಲಕ್ಕೆ ತಕ್ಕಹಾಗೆ ರಿಲೀಫ್ ಮೆಷರ್ಸ್ ತೆಗೆದುಕೊಳ್ಳುವುದರಿಂದ ಏನೂ ಅನುಕೂಲವಾಗುವುದಿಲ್ಲ.

ಖೆಡ್ಡ ಆಪರೇಷನ್ಸ್ ವಿಚಾರ. ಒಂದು ಸಂದರ್ಭದಲ್ಲಿ ವನ್ಯ ಪ್ರಾಣಿಗಳನ್ನು ಸಂರಕ್ಷಣೆ ಮಾಡಬೇಕು ಎಂದು ಹೇಳುತ್ತಾರೆ. ಮತ್ತೊಂದುಕಡೆ ಖೆಡ್ಡ ಆಪರೇಷನ್ ಮಾಡುತ್ತೇವೆಂದು ಆ ಪ್ರಾಣಿಗಳನ್ನು ಗೋಳು ಹುಯಿದುಕೊಳ್ಳುತ್ತಾರೆ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಖೆಡ್ಡ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ. ಇದು ವರೆಗೂ ಅದಕ್ಕೆ ಪ್ರತಿ ಸಲವು ಆಗಿರತಕ್ಕ ಖರ್ಚ ಎಷ್ಟು, ಬಂದಿರುವ ಉತ್ಪತ್ತಿ ಎಷ್ಟು ಅದರಿಂದ ಆಗತಕ್ಕಪ್ರಯೋಜನವೇನು ಎನ್ನುವುದರ ಬಗ್ಗೆ ಒಂದು ಟಿಪ್ಪಣಿ ಕೊಟ್ಟಿದ್ದರೆ ಅನುಕೂಲವಾಗುತ್ತಿತ್ತು.

ಕೋಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಬೇಕಾದಷ್ಟು ನಷ್ಟವಾಗಿದೆ. ಅಕ್ರಮಗಳು ನಡೆದಿವೆ, ಅನ್ಯಾಯಗಳು ನಡೆದಿವೆ. ಇದರಲ್ಲಿ ಆಗಿರತಕ್ಕ ೩೦ ಲಕ್ಷ ರೂಪಾಯಿ ನಷ್ಟ ಹೇಗೆ ಆಯಿತು ಎನ್ನುವುದನ್ನು ಪರಿಶೀಲನೆ ಮಾಡುವುದಕ್ಕೆ ಬದಲು ಹೊಸದಾಗಿ ಅಡ್ವಾನ್ಸ್ ಕೊಡುವುದಕ್ಕೆ ಹೊರಟಿದ್ದಾರೆ ಮಾರ್ಕೆಟಿಂಗ್ ಸೊಸೈಟಿ ವ್ಯವಹಾರದ ಬಗ್ಗೆ ತಕ್ಷಣ ಪ್ರೋಬ್ ಮಾಡುವುದಕ್ಕೆ ಅವಕಾಶವಿರುವಾಗ ಹಾಗೆ ಮಾಡದೆ ಅನ್ಯಾಯ, ಅಕ್ರಮಗಳು ನಡೆದು ನಷ್ಟವಾಗಿರುವಾಗ ಪುನಃ ಸಹಾಯ ಮಾಡಲು ಹಣ ಕೊಡುವುದು ಸರಿಯಾದುದಲ್ಲ.

ಕೆಲವು ಕಟ್ಟಡಗಳನ್ನು ತೆಗೆದುಕೊಳ್ಳಬೇಕೆಂಬ ಬೇಡಿಕೆ ಇಟ್ಟಿದ್ದಾರೆ. ಈಗ ಮಹಾರಾಜರ ಸ್ಥಾನಮಾನ-ಗಳನ್ನು ತೆಗೆದುಹಾಕಿದ್ದಾರೆ. ಬೆಂಗಳೂರು ನಗರದಲ್ಲಿರುವ ಮಹಾರಾಜರ ಅರಮನೆ ಹೆಚ್ಚಿನ ಬೆಲೆ ಬಾಳತಕ್ಕುದು. ಈಗ ಇರುವಂಥ ವರಮಾನ ತೆರಿಗೆ, ಆಸ್ತಿ ತೆರಿಗೆ ಇವುಗಳನ್ನೆಲ್ಲ ಕೊಟ್ಟು ಅರಮನೆಯನ್ನು ಉಳಿಸಿಕೊಳ್ಳುವುದಕ್ಕಾಗುವುದಿಲ್ಲ. ನಮ್ಮ ಸರ್ಕಾರದವರು ಮಾತುಕತೆ ನಡೆಸಿ ಅರಮನೆ ಇರತಕ್ಕ ಒಂದು ಸಾವಿರ ಎಕರೆ ಜಮೀನನ್ನು ತೆಗೆದುಕೊಂಡು ರಾಜಧಾನಿಯಾದ ಬೆಂಗಳೂರಿನಲ್ಲಿ ಅನೇಕ ಕಟ್ಟಡಗಳನ್ನು ಕಟ್ಟುವುದಕ್ಕೆ ಆ ಸ್ಥಳವನ್ನು ಉಪಯೋಗಿಸಿಕೊಳ್ಳಬಹುದಾಗಿದೆ. ಖಾಸಗಿಯವರು ನೆಗೋಷಿಯೇಟ್ ಮಾಡಿ ಅದನ್ನು ತೆಗೆದುಕೊಳ್ಳಲೂ ಬಹುದು. ಆದರೆ ನಮ್ಮ ಸರ್ಕಾರದವರು ಅರಮನೆಯನ್ನು ತೆಗೆದು ಕೊಳ್ಳುವುದಕ್ಕೆ ಕಾರ್ಯಕ್ರಮ ಹಾಕಿಕೊಂಡು ಸರಿಯಾದ ರೀತಿಯಲ್ಲಿ, ರಾಜ್ಯಕ್ಕೆ ಅನುಕೂಲವಾಗುವ ರೀತಿಯಲ್ಲಿ ಉಪಯೋಗಿಸಿಕೊಳ್ಳಬಹುದು ಎಂದು ಹೇಳುತ್ತೇನೆ.

ಎಂ. ಎಸ್. ಕೆ. ಮಿಲ್ಸ್, ಕೆ. ಸಿ. ಟಿ. ಮಿಲ್. ಕೋಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿ ಹೀಗೆ ಅನೇಕ ಸಂಸ್ಥೆಗಳಿಗೆ ಸಾಲ ಕೊಡಬೇಕೆಂದು ಹೊರಟಿದ್ದಾರೆ. ಬೆಂಗಳೂರು ನಗರದಲ್ಲಿರುವ ಮಹರಾಜ ಮಿಲ್ಸ್ ಮತ್ತು ಮಿನರ್ವ ಮಿಲ್ಸ್ ಬಗ್ಗೆ ಏನೂಮಾಡದೆ ಇರುವುದು ಬಹಳ ಅನ್ಯಾಯ. ಕೋಟ್ಯಾಂತರ ರೂಪಾಯಿಗಳನ್ನು ಎಂ. ಎಸ್. ಕೆ. ಮಿಲ್ಸ್‌ಗೆ ಖರ್ಚು ಮಾಡಿದ್ದಾರೆ. ಬೆಂಗಳೂರಿನ ಎರಡು ಕಾರ್ಖಾನೆಗಳಲ್ಲಿ ಸಾವಿರಾರು ಜನ ಕೆಲಸ ಮಾಡುತ್ತಿದ್ದರು ಮಿಲ್ಲುಗಳನ್ನು ಮುಚ್ಚಿರುವುದರಿಂದ ಕೆಲಸಗಾರರಿಗೆ ಬಹಳ ತೊಂದರೆಯಾಗಿದೆ. ಮಿಲ್ಲುಗಳ ಮಾಲೀಕರು ಅಲ್ಲಿರುವ ಜಾಗವನ್ನು ಮಾರಿಕೊಂಡು ದುಡ್ಡು ಮಾಡಿಕೊಳ್ಳು-ತ್ತಿದ್ದಾರೆ ಆದರೆ ಕೆಲಸಗಾರರು ಕಷ್ಟಪಟ್ಟು, ಬಹಳ ತೊಂದರೆಗೆ ಈಡಾಗಿರುವ ಸಂದರ್ಭ ಇದೆ. ಆದುದರಿಂದ ಬೇರೆ ಕಾರ್ಖಾನೆಗಳಿಗೆ ಸಹಾಯ ಮಾಡಿರುವ ರೀತಿಯಲ್ಲಿ ಸಹಾಯ ಮಾಡಿ, ಎರಡೂ ಕಾರ್ಖಾನೆಗಳನ್ನು ಅವರೇ ವಹಿಸಿಕೊಂಡು ಅಥವಾ ಬೇರೆ ರೀತಿಯಲ್ಲಿ ನಡೆಸಿ ಕೆಲಸವಿಲ್ಲದೆ ಇರುವವರಿಗೆ ಕೆಲಸ ಕೊಡುವುದಕ್ಕೆ ತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕು.

ನಮ್ಮ ಮುಂದೆ ಇಟ್ಟಿರುವ ಬೇಡಿಕೆಗಳಲ್ಲಿ ಅನೇಕ ಕಡೆಗಳಲ್ಲಿ ಟೋಕನ್ ಗ್ರಾಂಟ್ ಮಾತ್ರ ಕೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟ ಮೊತ್ತ ಲಕ್ಷಾಂತರ ರೂಪಾಯಿ ವರೆಗೆ ಇರುತ್ತದೆ ತಮಗೆ ಬೇಕಾದ ಹಾಗೆ ನಾಮಿನಲ್ ಅಜಸ್ಟ್‌ಮೆಂಟ್ ಮಾಡಿಕೊಂಡು ಖರ್ಚು ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಳ್ಳುತ್ತಿ-ದ್ದಾರೆ. ಆದುದರಿಂದ ಟೋಕನ್ ಗ್ರಾಂಟು ಕೇಳಿರುವ ಕಡೆ ವಿವರಗಳನ್ನು ಕೊಟ್ಟು ಎಷ್ಟೆಷ್ಟು ಯಾವರೀತಿ ಉಪಯೋಗ ಮಾಡುತ್ತಾರೆ ಎನ್ನುವ ವಿವರಣೆ ಕೊಟ್ಟಿದ್ದರೆ ಅನುಕೂಲವಾಗುತ್ತಿತ್ತು.

ಈಗ ಸಪ್ಲಿಮೆಂಟರಿ ಡಿಮಾಂಡನ್ನು ತಂದಿರುವುದರಲ್ಲಿ ಸಾಧಾರಣವಾಗಿ ಲೇಬರ್ ಅಂಡ್ ಎಂಪ್ಲಾಯ-ಮೆಂಟ್ ಎಂದು ಕೊಟ್ಟಿರತಕ್ಕ ಚಿತ್ರ ಬಹಳ ಆಕರ್ಷಣೀಯವಾಗಿದೆ. ಮಾಡಿರತಕ್ಕ ಅನ್ಯಾಯ, ಅಕ್ರಮಗಳನ್ನು ಮುಚ್ಚುವುದಕ್ಕೆ ಸಭೆಯ ಮುಂದೆ ಬೇಡಿಕೆಗಳನ್ನು ತಂದಿದ್ದಾರೆಯೇ ಹೊರತು ನ್ಯಾಯವಾದ ರೀತಿಯಲ್ಲಿ ತಂದಿಲ್ಲ. ಕ್ಯಾಮೋಫ್ಲೇಜ್ ಮಾಡಿ ನಮ್ಮ ಮುಂದೆ ಬೇಡಿಕೆಗಳನ್ನು ಇಟ್ಟಿದ್ದಾರೆ. ಇದನ್ನು ಒಪ್ಪಿಕೊಳ್ಳತಕ್ಕುದಲ್ಲ ತಿರಸ್ಕರಿಸತಕ್ಕುದು, ಇದರಿಂದ ಒಳ್ಳೆಯದಾಗುವುದಿಲ್ಲ ಎಂದು ಹೇಳಿ ನಾನು ಸೂಚಿಸಿರುವ ಕೆಲವು ಲೋಪದೋಷಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದುಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಏನು ಎಕ್ಸ್‌ಛೇಂಜ್ ಮಾಡುತ್ತಿದ್ದೀರಿ ಎನ್ನುವುದನ್ನು ತಿಳಿಯಬೇಕು.

MR. SPEAKER:—Charges cannot be made without following the particular procedure laid down. If she wanted to make a charge, she should have submitted that to me in writing and given a copy there of to the Hon. Minister conerned, before making the charges. This procedure has not been followed. When she made those charges, it escaped my notice. Now that it has been brought to my notice, I order that they stand expunged.

SRI H. SIDDAVEERAPPA :—What is this novel procedure you are following? You were presiding then and under your very nose this was said and you did not object to it then. Now I would like to know whether you are inspired to pass this order of expunction. Why did you not then and there when charge was being made, pass this order and why are you making it in the abesnce of the Hon. Member? You better make this order when she is present.

MR. SPEAKER :—I was not attentive when she made the charge. I was engaged in some other work.

Matter expunged as ordered by the Chairman.

SRI H. SIDDAVEERAPA :—Where is the procedure Sir? What I want to know is, you may pass any order, but it must be after hearing the Hon. Member. When she is absent, you are doing it. Is it fair? This gives colour to the view that you have not been impartial.

6-30 P. M.

MR. SPEAKER :—I need not consult the member. The charge is defamatory. A particular procedure is laid down in the rules for making allegations of defamatory nature. Since it is not followed, I have ordered that the matter stands expunged.

SRI H. SIDDAVEERAPPA :—I would like to know what is the matter that stands expunged?

MR SPEAKER :—That matter was brought to my notice. If it is there, it shall stand expunged.

SRI H. SIDDAVEERAPPA :—You please give an opportunity to the Hon. Member and hear her. She said that she was making the charge with a sense of responsibility,

MR SPEAKER : Let the Hon. Lady Member give notice and a copy of it to the Hon. Minister, and then I shall consider.

ಶ್ರೀ ಎನ್. ಹುಚ್ಚಮಾಸ್ತಿಗೌಡ :— ಪ್ರತಿ ಅಧಿವೇಶನದಲ್ಲೂ ಅನೇಕ ಆಕ್ಷೇಪಣೆಗಳನ್ನು ಮಾಡುತ್ತಿದ್ದಾರೆ. ತಾವು ಹೀಗೆಮಾಡಿದರೆ ಯಾವಾಗಲೂ ಮಾಡುತ್ತಿದ್ದುದನ್ನು ಬಿಟ್ಟು ಹೊಸ ಪ್ರೊಸೀಜರ್ ಅನುಸರಿಸಿದ ಹಾಗಾಗುತ್ತದೆ. ಶ್ರೀ ಸಿದ್ದವೀರಪ್ಪನವರು ಮಾತನಾಡುವಾಗ ಆಕ್ಷೇಪಣೆಮಾಡಿದ್ದಾರೆ. ಆಗ ಈ ರೀತಿಮಾಡಲಿಲ್ಲ. ಈಗ ಹೊಸದಾಗಿ ಈ ರೀತಿ ಮಾಡಲು ಕಾರಣವೇನು ? ಈಗ ಹೊಸದಾಗಿ ಬೇರೆ ಪ್ರೊಸೀಜರ್ ಅನುಸರಿಸುತ್ತಿರುವುದಕ್ಕೆ ಕಾರಣವನ್ನು ದಯೆಯಿಟ್ಟು ತಿಳಿಸಬೇಕು.

SRI K. H. PATIL:—Sir, I rise to a Point of Order, under Rules 315 and 316. I am not going into the merits or demerits of the debate. I wish to bring to the notice of the Hon. Speaker that wherever the proceedings are to be expunged a certain procedure has to be followed. Rule 315 says :—

> "If the Speaker is of opinion that a word has or have been used in debate which is or are defamatory or indecent, or unparlimentary or undignified, he may, in his discretion, order that such word or wordrs be expunged from the proceedings of the Assembly."

Therefore, you should know first the word that has been used. It was stated by you that, you have not heard what has been said by the Hon. Member. Therefore, you may expunge it tomorrow after going through the proceedings. You cannot do it today unless you read and come to the conclusion. This is not a proper and healthy procedure.

SRI H. SIDDAVEERAPPA :— The Hon. Member made those observations with full responsibility, and she is responsible fully for what she has said. If you have to expunge those words in all fairness as a lawyer, even natural justice demands an opportunity should be given to her to say whatever she wants to say.

Matter expunged as decided by the Chair

MR. SPEAKER :—As was pointed out by Sri K. H. Patil, if in the opinion of the Speaker the words are defamatory then they could be expunged. Accordingly I have ordered for their expunction If she wants to make allegation-defamatory allegations-let her follow the procedure laid down in the rules.

SRI Y. RAMAKRISHNA (Minister for Health) :—ನಾನು ಮಾನ್ಯ ಸದಸ್ಯರ ಭಾಷಣದ ಕಾಪಿ ಕೊಡಬೇಕೆಂದು ಕೇಳಿದ್ದೇನೆ. ಅದು ಬಂದರೆ ನಾನು ಎಕ್ಸ್‌ಪ್ಲೈನ್ ಮಾಡುವುದಕ್ಕೆ ಪ್ರಯತ್ನಪಡುತ್ತೇನೆ. I may be allowed to explain the matter. Serious allegations have been made against me, which really affect my prestige and character.

ಶ್ರೀ ಎ. ನಂಜಪ್ಪ :—ನನಗೆ ಮಾತನಾಡಲು ಅವಕಾಶ ಕೊಡಬೇಕು. ಏನು ಗೊತ್ತಿಲ್ಲದೆ ಹೇಳುವುದು ಸರಿಯೇ ? ರಿಕಾರ್ಡ್ ಇದೆ.

ಅಧ್ಯಕ್ಷರು :—ನಾಳೆ ಬೇಕಾದರೆ ಅವಕಾಶಕೊಡುತ್ತೇನೆ, ಮಾತನಾಡಿ.

Matter expunged as decided by the Chairman.

ಶ್ರೀ ಎಸ್. ಚನ್ನಯ್ಯ :—ಹೆಲ್ತ್ ಮಿನಿಸ್ಟರು ಕಾಪಿ ಕೊಡಿ ಎಂದು ಕೇಳುತ್ತಾ ಇದ್ದಾರೆ, ಅವರಿಗೆ ಕಾಪಿ ಕೊಡಿಸಿ, ಅವರು ಏನು ಜವಾಬು ಕೊಡುತ್ತಾರೋ ಕೊಡಲಿ, ಆಮೇಲೆ ನೋಡೋಣ.

ಅಧ್ಯಕ್ಷರು :—ಕಾಪಿ ಕೊಡಲಿಕ್ಕೆ ಬರುತ್ತದೆಯೋ ಇಲ್ಲವೋ ಎಂಬುದನ್ನು ನಾನು ತೀರ್ಮಾನ ಮಾಡಬೇಕೇ ಹೊರತು, ತಾವು ಆ ರೀತಿ ಹುಕುಂ ಮಾಡಲಿಕ್ಕೆ ಬರುವುದಿಲ್ಲ.

MR. SPEAKER :—Let him give a notice. Let us consider that.

ಶ್ರೀ ಎಚ್. ಸಿದ್ದವೀರಪ್ಪ : ನನ್ನ ಹತ್ತಿರ ಇದರ ವಿಚಾರವಾಗಿ ಕೆಲವು ಸಾಹಿತ್ಯ ಇತ್ತು, ನಾನು ಬೇಕು ಅಂತಲೇ ಇದನ್ನು ಎತ್ತಲಿಲ್ಲ ಉದ್ದೇಶ ಪೂರ್ವಕವಾಗಿ. ಏಕೆಂದರೆ ನಿಮಗೆ ನಾವು ಒಂದು ನೋಟೀಸ್ ಕೊಟ್ಟಿದ್ದೇವೆ, ಅದರ ಪ್ರಕಾರ ನೀವೇನಾದರೂ ಒಂದು ಅವಕಾಶ ನೀಡುತ್ತೀರೇನೋ ಅಂತ ಕಾದುಕೊಂಡು ಕುಳಿತ್ತಿದ್ದೇವೆ. ಅದಕ್ಕೆ ಒಂದು ಶಬ್ದಕೂಡ ಹೇಳಲಿಲ್ಲ.

ಶ್ರೀ ಎಸ್. ಚನ್ನಯ್ಯ :—ನೀವೇನಾದರೂ ಮಾಡಬೇಕಾದರೆ ನಮಗೆ ಬಿಡಿ ಅಂತ ಹೇಳುವುದಿಲ್ಲ. ಯಾರು ಏನು ಹೇಳಬೇಕೋ ಅವರಿಗೆ ಒಂದು ಚಾನ್ಸ್ ಕೊಡಬೇಕು. ನೀವೆ ಎಲ್ಲಾ ತೀರ್ಮಾನ ಮಾಡ್ತೀನಿ ಅಂದರೆ ಅದು ಆಗುವುದಿಲ್ಲ.

ಅಧ್ಯಕ್ಷರು :—ಏನ್ರೀ ಹೀಗೆ ಮಾತನಾಡುತ್ತೀರಿ ? ನಮ್ಮ ಜವಾಬ್ದಾರಿ ಅರಿತುಕೊಂಡು ಮಾತನಾಡುತ್ತೀರೋದು ಏನ್ರಿ ಇದು ? ಕುಳಿತುಕೊಳ್ರಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ ;—ನಾವು ತಮಗೆ ಮರ್ಯಾದೆ ಕೊಡುತ್ತೇವೆ. ತಾವು ನಮಗೆ ದಯವಿಟ್ಟು ಕುಳಿತುಕೊಳ್ರಿ ಎಂದು ಹೇಳಬೇಕು. ಇಲ್ಲಿರತಕ್ಕವರು ಎಲ್ಲರಿಗೂ ಗೌರವ ಇದೆ, ತಮಗೆ ಒಬ್ಬರಿಗೇ ಅಲ್ಲ.

HALF AN HOUR DISCUSSION ARSING OUT OF REPAIRS TO QUESTION No. 55 (No. 113 of 29-1-1970) RE-WATER SUPPLY POSITION IN TUMKUR TOWN.

ಶ್ರೀ ಬಿ. ಪಿ. ಗಂಗಾಧರ್ (ತುಮಕೂರು):–ಸ್ವಾಮಿ ನಮ್ಮ ತುಮಕೂರು ಟೌನಿನ ದುರದೃಷ್ಟ ಅಂತ ಕಾಣುತ್ತದೆ. ಯಾವತ್ತಿನ ದಿವಸ ನಮ್ಮ ನಗರದ ವಿಷಯ ಬರುತ್ತದೆಯೋ ಅದೇ ದಿನ ಈ ತೊಂದರೆಗಳೆಲ್ಲ ಬರುತ್ತವೆ. ಈಗ ಅರ್ಧಗಂಟೆ ಚರ್ಚೆಯನ್ನು ತೆಗೆದುಕೊಳ್ಳಬೇಕೆಂದು ತಮ್ಮೆಲ್ಲರ ಗಮನಕ್ಕೆ ತಂದಿದ್ದೇನೆ ತುಮಕೂರು ನಗರದ ವಾಟರ್ ಸಪ್ಲೈ ವ್ಯವಸ್ಥೆ ೧೯೩೪ನೇ ಇಸವಿ ಸುಮಾರಿನಲ್ಲಿ ಆಗಿದೆ, ಆಗ ಆ ಊರಿನ ಜನ ಸಂಖ್ಯೆ ಸುಮಾರು ೨೩ಸಾವಿರದ ೫೦೦ಮಾತ್ರ ಇತ್ತು. ಆಗಿನಪರಿಸ್ಥಿತಿಗೆ ಈ ಒಂದು ವ್ಯವಸ್ಥೆ ಸಾಕಾಗಬಹುದು

(ಶ್ರೀ ಬಿ. ಪಿ. ಗಂಗಾಧರ್)

ಅನ್ನುವ ದೃಷ್ಟಿಯಿಂದ ಆಗಿನ ತಜ್ಞರು ಇದನ್ನು ಮಾಡಿದ್ದರು. ೧೯೨೪ನೇ ಇಸವಿಯಲ್ಲಿ ಇಲ್ಲಿಯವರೆಗೂ ಸುಮಾರು ೪೬ ವರ್ಷವಾಯಿತು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಸುಮಾರು ಎರಡು ದಶಕಗಳಾದುವು ಆದರೂ ಕೂಡ ೨೩ ಸಾವಿರದ ೫೦೦ ಜನಕ್ಕೆ ಮಾಡಿದ ವ್ಯವಸ್ಥೆ ಏನಿದೆ ಅದೇ ಸುಮಾರು ೮೦ ಸಹಸ್ರ ಜನಸಂಖ್ಯೆಗೂ ಇದೆ. ಆ ಊರಿನಲ್ಲಿರತಕ್ಕ ವಿದ್ಯಾರ್ಥಿಗಳ ಸಂಖ್ಯೆ ೨೫ ಸಾವಿರ, ಇಂಜಿನಿಯರಿಂಗ್ ಕಾಲೇಜು, ಪಾಲಿಟೆಕ್ನೀಕು, ಗವರ ಮೆಂಟ್ ಕಾಲೇಜು ಇವುಗಳೆಲ್ಲಾ ಅಲ್ಲಿ ಇದೆ. ಆಜುಬಾಜುಯೆಂದು ಬರತಕ್ಕ ವಿದ್ಯಾರ್ಥಿಗಳ ಸಂಖ್ಯೆ ೨೦-೨೫ ಸಾವಿರ ಎಲ್ಲಾ ಒಟ್ಟು ಸೇರಿ ಆಗುತ್ತದೆ. ನಗರಕ್ಕೆ ಬರತಕ್ಕ ಹೋಗತಕ್ಕವರ ಫ್ಲೋಟಿಂಗ್ ಪಾಪ್ಯುಲೇಷನ್ ಸೇರಿದರೆ ಒಂದು ಲಕ್ಷಕ್ಕೂ ಕೂಡ ಕಡಿಮೆ ಏನೂ ಆಗುವುದಿಲ್ಲ. ಇಷ್ಟು ಜನಕ್ಕೆ ಕಾಂಗ್ರೆಸ್ ಸರ್ಕಾರ ಒಂದವೇಳೂ ಕೂಡ ೧೯೨೪ನೇ ಇಸವಿಯಲ್ಲಿ ಮಾಡಿದ ಒಂದು ವ್ಯವಸ್ಥೆಯೇ ಸಾಕಾಗುತ್ತದೆ ಎಂದು ಭಾವನೆ ಇಟ್ಟುಕೊಂಡಿರುವುದನ್ನು ನೋಡಿದರೆ ಹಿಂದೆ ಇದ್ದ ಮಿನಿಸ್ಟರುಗಳು ಮತ್ತು ಈಗ ಇರತಕ್ಕ ಮಂತ್ರಿಗಳು ಯಾರೂ ಕೂಡ ಇದನ್ನು ಒಂದು ಒಳ್ಳೆಯ ರೀತಿಯಿಂದ ನೋಡುತ್ತಾ ಇಲ್ಲ. ಆವತ್ತಿನಿಂದ ಇವತ್ತಿನವರೆಗೂ ಒಂದು ಲೀಟರ್ ನೀರು ಸಹ ಜಾಸ್ತಿ ಮಾಡಲಿಕ್ಕೆ ಪ್ರಯತ್ನ ಮಾಡಿಲ್ಲ ಎಂಬುದು ನಮ್ಮೆಲ್ಲರಿಗೂ ಚೆನ್ನಾಗಿ ಗೊತ್ತಾಗುತ್ತದೆ. ನಾನು ಇಲ್ಲಿಗೆ ಬಂದು ೪ ವರ್ಷ ಆಯಿತು. ಇದನ್ನು ಪ್ರತಿಸಾರಿಯೂ ಹೇಳುತ್ತಾ ಇದ್ದೇನೆ. ಇದು ನಿಮ್ಮ ಕಿವಿಗೆ ಬೀಳುತ್ತಲೇ ಇಲ್ಲ.

(The House was plunged in darkness when electricity fai ed.

MR. SPEAKER :—The House stands adjourned and will meet tomorrow at 1 P. M.

The House adjourned fifty five minutes past Six of the Clock to meet tomorrow at One O' Clock on Friday the 16th October 1970.

WD 15526—GPB—550-29-12-1970